ಶ್ರೀ ಯು.ಆರ್. ಸಭಾಪತಿ :— ಇವತ್ತು ಐದನೇ ತಾರೀಖು ಆಯಿತು. 10 ಇಲಾಖೆಗಳ ಬೇಡಿಕೆಗಳನ್ನು ಮಾತ್ರ ಮಂಡನೆ ಮಾಡಿದ್ದಾರೆ.

ಅಧ್ಯಕ್ಷರು :— ನಿಮ್ಮ ಮುಖಂಡರಿದ್ದಾರೆ. ಇಲ್ಲಿ ಬಂದು ಕುಳಿತುಕೊಂಡು ಚರ್ಚೆ ಮಾಡೋಣ ಉಳಿದ ಬೇಡಿಕೆಗಳನ್ನು ಏನು ಮಾಡಬೇಕು ಎಂದು.

ಶ್ರೀ ಯು.ಆರ್. ಸಭಾಪತಿ :— ಇನ್ನೂ ಎಷ್ಟು ದಿವಸ ಬೇಕು? ಉಳಿದ 40 ಬೇಡಿಕೆಗಳನ್ನು ಮಂಡನೆ ಮಾಡುವುದು ಯಾವಾಗ? ಮಾನ್ಯ ಮಂತ್ರಿಗಳು ಉತ್ತರ ಕೊಡುವುದು ಯಾವಾಗ?

ಅಧ್ಯಕ್ಷರು :— ತಾವು ಹಿರಿಯ ಸದಸ್ಯರಾದ ವಾಟಾಳ್ ನಾಗರಾಜ್‌ರವರ ಮಾರ್ಗದರ್ಶನವನ್ನು ಪಡೆದುಕೊಳ್ಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಎಲ್ಲಾ ಬೇಡಿಕೆಗಳನ್ನು ಅವರು ಇಲ್ಲಿ ಮಂಡಿಸಲಿ. ಯಾರಿಗೆ ಯಾವ ವಿಷಯ ಬೇಕೋ ಆ ವಿಷಯಗಳ ಮೇಲೆ ಮಾತನಾಡುತ್ತಾರೆ. ಇವಿಷ್ಟೇ ಬೇಡಿಕೆಗಳನ್ನು ಪಾಸ್ ಮಾಡುವುದಕ್ಕಿಂತ ಮುಂಚೆ ಉಳಿದ ಎಲ್ಲವನ್ನೂ ಮಂಡಿಸಲಿ.

ಅಧ್ಯಕ್ಷರು :— ಮಾನ್ಯ ರೆಡ್ಡಿಯವರೇ ನೀವು ಮಾತನಾಡಿ, ಇವರೆಲ್ಲಾ ಆಂಟಿ-ಕಮ್ಯುನಿಸ್ಟ್. ನಿಮಗೆ ತೊಂದರೆ ಮಾಡುವುದಕ್ಕೆ ಇದ್ದಾರೆ.

7. ವಿತ್ತೀಯ ಕಾರ್ಯಕಲಾಪಗಳು

+ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :— ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಈ ಸದನದ ಮುಂದೆ ಮಂಡಿಸಿರತಕ್ಕಂಥ ಬೇಡಿಕೆಗಳಲ್ಲಿ ಮುಖ್ಯವಾಗಿ ವ್ಯವಸಾಯ ಮತ್ತು ತೋಟಗಾರಿಕಾ ಇಲಾಖೆಯ ಬಗ್ಗೆ ನಾನು ಮೊದಲು ಮಾತನಾಡುತ್ತೇನೆ. ಮಾನ್ಯ ಬೈರೇಗೌಡರು ಕೃಷಿ ಮಂತ್ರಿಯಾಗಿ ನಾಲ್ಕೂವರೆ ವರ್ಷಗಳನ್ನು ಪೂರೈಸಿರುವುದಕ್ಕೋಸ್ಕರ ನಾನು ಅವರನ್ನು ಅಭಿನಂದನೆ ಮಾಡುತ್ತೇನೆ. ಬಹುಶಃ ಕರ್ನಾಟಕ ರಾಜ್ಯದಲ್ಲಿ ದೀರ್ಘಕಾಲದ ಕೃಷಿ ಮಂತ್ರಿಯಾಗಿ ಕಾರ್ಯ ನಿರ್ವಹಿಸಿರತಕ್ಕಂಥವರಲ್ಲಿ ಮಾನ್ಯ ಬೈರೇಗೌಡರೂ ಒಬ್ಬರು. ಪ್ರಾಮಾಣಿಕವಾಗಿ ಕೃಷಿ ರಂಗವನ್ನು ಅಭಿವೃದ್ಧಿಪಡಿಸಬೇಕು ಎಂದು ಕಾಳಜಿ ಇರತಕ್ಕಂಥವರಲ್ಲಿ ಅವರು ಕೂಡ ಒಬ್ಬರು. ಅವರ ಪ್ರಾಮಾಣಿಕತೆಯ ಬಗ್ಗೆ ನಮಗೆ ಯಾವುದೇ ರೀತಿಯಾದಂಥ ಅನುಮಾನವಿಲ್ಲ, ಭಿನ್ನಾಭಿಪ್ರಾಯವೂ ಇಲ್ಲ. ಮೊಟ್ಟಮೊದಲ ಬಾರಿಗೆ ಕರ್ನಾಟಕ ರಾಜ್ಯದಲ್ಲಿ ಹೊಸ ಕೃಷಿ ನೀತಿಯನ್ನು ಜಾರಿಗೆ ತರಬೇಕುಎಂದು ಕೃಷಿ ನೀತಿಯನ್ನು ಅಳವಡಿಸಿರುವಂಥವರಲ್ಲಿ ಅವರೂ ಒಬ್ಬರು ಮತ್ತು ಆ ಇಲಾಖೆಯನ್ನು ಬಹಳ ಚುರುಕಗೊಳಿಸಬೇಕು ಎಂದು ಪ್ರಾರಂಭದಿಂದಲೂ ಬಹಳ ಪ್ರಯತ್ನ ಮಾಡಿದರು. ಇದರ ಜೊತೆಗೆ ಈಗ ಅವರಿಗೆ ತೋಟಗಾರಿಕೆ ಇಲಾಖೆಯೂ ಕೂಡ ಬಂದಿದೆ. ನಾನು

ತಮ್ಮ ಮುಖಾಂತರ ಮಾನ್ಯ ಬೈರೇಗೌಡರನ್ನು ಮತ್ತು ಸರ್ಕಾರವನ್ನು ಕೇಳತಕ್ಕಂಥಾದ್ದು ಏನೆಂದರೆ, ಈ ನಾಲ್ಕೂವರೆ ವರ್ಷಗಳಲ್ಲಿ ಕೃಷಿ ರಂಗದಲ್ಲಿ ಕರ್ನಾಟಕ ರಾಜ್ಯದಲ್ಲಿ ಏನೆಲ್ಲಾ ಬದಲಾವಣೆಗಳಾಗಿವೆ? ಏನೆಲ್ಲಾ ಬೆಳವಣಿಗೆಗಳಾಗಿವೆ? ಈ ನಾಲ್ಕೂವರೆ ವರ್ಷಗಳಲ್ಲಿ ಸಕಾರಾತ್ಮಕವಾದ ಅಂಶಗಳು ಏನೇನು ಹೊರಗಡೆ ಬಂದಿವೆ? ಮತ್ತು ನಕಾರಾತ್ಮಕವಾದ ಅಂಶಗಳು ಏನೇನು ಬಂದಿವೆ? ಎಂದು ಕೇಳುತ್ತಿದ್ದೇನೆ. You have to give the Balance sheet before the Karnataka people. ಅಂದರೆ ವಾಸ್ತವಾಂಶಗಳನ್ನು ಜನರ ಮುಂದೆ ಇಡಬೇಕಾಗುತ್ತದೆ. ಏಕೆಂದರೆ, ಇಡೀ ವ್ಯವಸ್ಥೆಯಲ್ಲಿ ಎಲ್ಲವನ್ನೂ ಸರಿ ಮಾಡಲಿಕ್ಕಾಗುತ್ತದೆ ಎಂದು ನಾನು ನಂಬುವುದಿಲ್ಲ, ಅದು ಸಾಧ್ಯವೂ ಇಲ್ಲ. ಒಂದು ರಾಜ್ಯ ಸರ್ಕಾರ ಇಡೀ ಕೃಷಿ ರಂಗದಲ್ಲಿ ಮೂಲಭೂತವಾದಂಥ ಬದಲಾವಣೆಯನ್ನು ತರಲು ಸಾಧ್ಯವಾಗುತ್ತದೆ ಎಂದು ನಾನು ನಂಬುವುದಿಲ್ಲ, ಅದು ಸಾಧ್ಯವೂ ಇಲ್ಲ. ಆದರೆ ಅದರ ಇತಿಮಿತಿಯಲ್ಲಿ, ನಾಲ್ಕೂವರೆ ವರ್ಷಗಳ ಕಾಲದಲ್ಲಿ ನಿಮ್ಮ ಸಾಧನೆ ಏನು? ಎನ್ನುವುದರ ಬಗ್ಗೆ ನೀವು ನಿಮ್ಮ ಬ್ಯಾಲೆನ್ಸ್ ಷೀಟನ್ನು ಈ ರಾಜ್ಯದ ಜನತೆಯ ಮುಂದೆ ಇಡಬೇಕಾಗುತ್ತದೆ. ನೀವು ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದಿರಿ, ಹೊಸ ಕೃಷಿ ನೀತಿಯನ್ನು ತಂದಿರಿ. ಅದು ಎಷ್ಟರಮಟ್ಟಿಗೆ ಜಾರಿಯಾಗಿದೆ? ಯಾವ ವಿಭಾಗದ ಜನತೆಗೆ ಅದರಿಂದ ಪ್ರಯೋಜನವಾಗಿದೆ? ಯಾವ ವಿಭಾಗದ ಜನರಿಗೆ ಅದರಿಂದ ಪ್ರಯೋಜನವಾಗಿಲ್ಲ ಎನ್ನತಕ್ಕಂಥ ಅಂಶಗಳನ್ನು ನೀವು ಜನತೆಯ ಗಮನಕ್ಕೆ ತರಬೇಕಾಗುತ್ತದೆ ಮತ್ತು ಕೃಷಿ ರಂಗದ ಬಹಳ ಮುಖ್ಯವಾದ ಅಂಶಗಳು ಏನೇನು ಇವೆ, ಭೂಮಿ ಪ್ರಶ್ನೆ ಏನಾಗಿದೆ, ಕೃಷಿ ಕಾರ್ಮಿಕರ ಪ್ರಶ್ನೆ ಏನಾಗಿದೆ, ರೈತರ ಪ್ರಶ್ನೆ ಏನಾಗಿದೆ, ಇಡೀ ಕೃಷಿ ರಂಗದ ಉತ್ಪಾದನಾ ಬೆಳವಣಿಗೆ ಎಷ್ಟು ಪರ್ಸೆಂಟೇಜ್ ಆಗಿದೆ ಎನ್ನುವುದನ್ನು ಗಮನಿಸಬೇಕಾಗಿರತಕ್ಕಂಥಾದ್ದು, ನಮ್ಮೆಲ್ಲರ ಕರ್ತವ್ಯ. ಏಕೆಂದರೆ ನಾವೂ ಕೂಡ ಈ ಸದನದ ಸದಸ್ಯರಾಗಿ ನಾಲ್ಕೂವರೆ ವರ್ಷಗಳನ್ನು ಮುಗಿಸಿದ್ದೇವೆ. ನಾಳೆ ನಾವು ಜನತೆಯ ಮುಂದೆ ಹೋದಾಗ ನಾವು ಜನತೆಗೆ ಹೇಳಬೇಕಾಗುತ್ತದೆ, ನಾಲ್ಕೂವರೆ ವರ್ಷಗಳ ಕಾಲದಲ್ಲಿ ಕರ್ನಾಟಕದ ಕೃಷಿ ರಂಗದಲ್ಲಿ ಏನೇನು ಬೆಳವಣಿಗೆಗಳಾಗಿವೆ, ಶಾಸನಸಭಾ ಸದಸ್ಯರಾಗಿ ಕೃಷಿ ರಂಗದ ಬಗ್ಗೆ ನಾವು ಏನೆಲ್ಲಾ ಚರ್ಚೆ ಮಾಡಿದೆವು, ನೀರಾವರಿ ಬಗ್ಗೆ ಏನು ಚರ್ಚೆ ಮಾಡಿದೆವು, ಸಣ್ಣ ನೀರಾವರಿ ಬಗ್ಗೆ ಏನೇನು ಚರ್ಚೆ ಮಾಡಿದೆವು, ಕೃಷಿ ಉತ್ಪನ್ನಗಳ ಬಗ್ಗೆ ಏನು ಚರ್ಚೆ ಮಾಡಿದೆವು ಎನ್ನುವ ಅಂಶಗಳನ್ನು ನಾವು ಜನತೆಯ ಮುಂದೆ ಇಡಬೇಕಾಗುತ್ತದೆ. ನಾನು ಈ ಎಲ್ಲಾ ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ನನಗೆ ಅಷ್ಟು ಸಮಯ ಸಿಗುವುದಿಲ್ಲ ಎಂದು ಗೊತ್ತಿದೆ. ನಾನು ಒಂದು ಉದಾಹರಣೆಯಿಂದ ಪ್ರಾರಂಭ ಮಾಡುತ್ತೇನೆ. ಮೊನ್ನೆತಾನೇ ಮಾನ್ಯ ಸಿದ್ದರಾಮಯ್ಯನವರು ಮಂಡಿಸಿದ ಬಜೆಟ್ ನಲ್ಲಿ ಕೃಷಿ ರಂಗಕ್ಕೆ ಸಂಬಂಧಪಟ್ಟಹಾಗೆ ಮಂಡಿಸಿರತಕ್ಕಂಥ ಬಹಳ ಪ್ರಮುಖವಾದ ಒಂದು ಅಂಶವೆಂದರೆ, ಕೃಷಿ ರಂಗದಲ್ಲಿ ಆಹಾರ ಸಾಮಗ್ರಿಗಳ ಉತ್ಪನ್ನಗಳ ಬೆಳವಣಿಗೆ ಬಗ್ಗೆ ಅವರು ಪ್ರಸ್ತಾಪ ಮಾಡಿದ್ದಾರೆ. 1998-99ನೇ ಸಾಲಿನಲ್ಲಿ ನಾವು ಉತ್ತಮ ಬೆಳೆಯನ್ನು

ನಿರೀಕ್ಷಿಸಿ 97.8 ಲಕ್ಷ ಟನ್ ಆಹಾರ ಧಾನ್ಯದ ಉತ್ಪಾದನಾ ಗುರಿ ಸಾಧಿಸುವ ಬಗ್ಗೆ ಭರವಸೆಯನ್ನು ತಾಳಿದ್ದೆವು. ದುರದೃಷ್ಟವಶಾತ್, ಅತಿವೃಷ್ಟಿಯಿಂದಾಗಿ, ರಾಜ್ಯದ ಅನೇಕ ಕಡೆ ಬೆಳೆ ಹಾಳಾಯಿತು. ಅದ್ದರಿಂದ ಆಹಾರ ಉತ್ಪಾದನೆಯ ಗುರಿ ಕಡಿಮೆಯಾಗಲಿದೆ. 1999-2000 ದ ಸಾಲಿನ ಆಹಾರ ಧಾನ್ಯದ ಉತ್ಪಾದನೆ 101.2 ಲಕ್ಷ ಟನ್ ಆಗಬಹುದು ಎಂಬ ನಿರೀಕ್ಷೆ ಇದೆ. ಇದು ಕೇವಲ ನಿರೀಕ್ಷೆ. ಆದರೆ ವಾಸ್ತವಾಂಶ ಏನು ಎನ್ನುವುದನ್ನು ತಿಳಿದಾಗ, ನನಗೆ ಗೊತ್ತಿರುತಕ್ಕಂಥ ಅಂಕಿಅಂಶಗಳ ಪ್ರಕಾರ ಆಹಾರ ಸಾಮಗ್ರಿಗಳ ಉತ್ಪಾದನೆ 92.1 ಲಕ್ಷ ಟನ್ ಕೂಡ ಮೀರಿಲ್ಲ. ಇದು ಒಂದು ಕಡೆಯಾದರೆ, ಇನ್ನೊಂದು ಕಡೆ ಯೋಜನಾ ಇಲಾಖೆಯ ಅಂಕಿಅಂಶಗಳ ಪ್ರಕಾರ 2000 ಇಸವಿಗೆ ಕರ್ನಾಟಕ ರಾಜ್ಯದಲ್ಲಿ ಎಲ್ಲ ಜನರಿಗೂ ಆಹಾರ ಸಾಮಗ್ರಿಗಳನ್ನು ಒದಗಿಸಬೇಕು ಎಂದರೆ ಕನಿಷ್ಠ 145 ಲಕ್ಷ ಟನ್ ಆಹಾರ ಸಾಮಗ್ರಿಗಳು ಕರ್ನಾಟಕ ರಾಜ್ಯದಲ್ಲಿ ಉತ್ಪಾದನೆ ಆಗಬೇಕು. ಆಗ ಮಾತ್ರ ನಾವು ಕರ್ನಾಟಕ ರಾಜ್ಯದ ಜನತೆಗೆ ಆಹಾರ ಸಾಮಗ್ರಿಗಳಲ್ಲಿ ಸ್ವಾವಲಂಬನೆಯಾಗಲು ಸಾಧ್ಯವಾಗುತ್ತದೆ ಎನ್ನುವುದನ್ನು ಯೋಜನಾ ಇಲಾಖೆಯವರು ಅಂಕಿ ಅಂಶಗಳ ಸಮೇತ ಹೇಳಿದ್ದಾರೆ. ಹಾಗಾದರೆ ಆಹಾರ ಸಾಮಗ್ರಿಗಳ ಉತ್ಪಾದನೆಯಲ್ಲಿ ಹೆಚ್ಚು ಕಡಿಮೆ 50 ಲಕ್ಷ ಟನ್ ಆಹಾರ ಸಾಮಗ್ರಿಗಳ ಕೊರತೆಯನ್ನು ಕರ್ನಾಟಕ ರಾಜ್ಯ ಅನುಭವಿಸಬೇಕಾಗುತ್ತದೆ. ಇದನ್ನು ಪರಿಹಾರ ಮಾಡಲು, ಕೃಷಿ ರಂಗದ ನಾಯಕತ್ವ ವಹಿಸಿರತಕ್ಕಂಥ ಸನ್ಮಾನ್ಯ ಬೈರೇಗೌಡರು ಯಾವ ಕಾರ್ಯಕ್ರಮವನ್ನು ಹಾಕಿದ್ದಾರೆ ಎನ್ನುವುದನ್ನು ಅವರು ಇವತ್ತು ಕರ್ನಾಟಕ ರಾಜ್ಯದ ಜನತೆಗೆ ತಿಳಿಸಬೇಕಾಗುತ್ತದೆ. ಎರಡನೆಯ ಅಂಶವೆಂದರೆ, ಬಹಳ ಪ್ರಯಾಸದಿಂದ ಬಂಹಳ ಅಂಬೀಷಿಯಸ್ ಆಗಿ ಹೊಸ ಕೃಷಿ ನೀತಿಯನ್ನು ಜಾರಿಗೆ ತರಲು ಮಾನ್ಯ ಬೈರೇಗೌಡರು ಪ್ರಯತ್ನ ಮಾಡಿದರು. ಅದು ಒಂದು ಶ್ಲಾಘನೀಯವಾದಂಥ ಕೆಲಸ. ಆದರೆ ಆ ಹೊಸ ಕೃಷಿ ನೀತಿಯಿಂದ ಇವತ್ತು ಕೃಷಿ ರಂಗದಲ್ಲಿ ಏನು ಬೆಳವಣಿಗೆಗಳಾಗಿವೆ? ಅದನ್ನು ಮಂಡಿಸಿದಾಗ ಮಾನ್ಯ ಬೈರೇಗೌಡರು ಬಹಳ ಪ್ರಮುಖರಾಗಿ ಒತ್ತಿ ಹೇಳಿದ್ದು ಏನೆಂದರೆ, ನಮ್ಮ ರೈತರು ಬದುಕಬೇಕು ಎಂದಾದರೆ, ಅವರು ಉಳಿಯಬೇಕು ಎಂದಾದರೆ, ನಾವು ಮಾರುಕಟ್ಟೆಯಲ್ಲಿ ಸ್ಪರ್ಧೆ ಮಾಡತಕ್ಕಂಥ, ಅಂದರೆ ಬಹಳ ಪ್ರಮುಖವಾಗ ಎಕ್ಸ್‌ಪೋರ್ಟ್ ಕ್ವಾಲಿಟಿ ಇರತಕ್ಕಂಥ ಅಂಶಗಳನ್ನು ಬೆಳವಣಿಗೆ ಮಾಡಬೇಕು, ಅದರಲ್ಲೂ ಮುಖ್ಯವಾಗಿ ಫ್ಲಾರಿಕಲ್ಚರ್ ಮತ್ತು ಅಕ್ವಾಕಲ್ಚರ್ ಅನ್ನು ಅಭಿವೃದ್ಧಿ ಮಾಡಬೇಕು ಎನ್ನುವಂಥ ವಾದವನ್ನು ಸನ್ಮಾನ್ಯ ಬೈರೇಗೌಡರು ಇಟ್ಟಿದ್ದರು. ಹಾಗಾದರೆ ನಾವು ಹೊಸ ನೀತಿಯನ್ನು ಒಪ್ಪಿಕೊಂಡು ಹೆಚ್ಚು ಕಡಿಮೆ ಎರಡು ಮುಕ್ಕಾಲು ವರ್ಷಗಳಾಗಿವೆ. ನಾವು ಇವತ್ತು

5.40 ಪಿಎಂ.

ಫ್ಲೋರಿಕಲ್ಚರ್‌ನಲ್ಲಿ ಮಾಡಿರತಕ್ಕಂಥ ಸಾಧನೆ ಏನು? ನಾವು ಅಂತರ್ ರಾಷ್ಟ್ರೀಯ ಮಾರುಕಟ್ಟೆಗೆ ಎಷ್ಟು ಲಾಭ ಆಗಿದೆ? ಈ ಬೆಳೆಯಿಂದ ರೈತರಿಗೆ ಎಷ್ಟು ಹಣ ಸಿಕ್ಕಿದೆ ಎನ್ನತಕ್ಕಂಥ ಬ್ಯಾಲೆನ್ಸ್ ಷೀಟ್‌ನ್ನು ಮಾನ್ಯ ಮಂತ್ರಿಗಳು ಈ ಸದನದಲ್ಲಿ ತಿಳಿಸಬೇಕಾಗುತ್ತದೆ. ಏಕೆಂದರೆ

ಬ್ಯಾಲೆನ್ಸ್ ಷೀಟ್ ನಮ್ಮ ಹತ್ತಿರ ಇಲ್ಲ, ಅದರ ಆಸುಪಾಸು ಇರತಕ್ಕಂಥ ಅಂಕಿಅಂಶಗಳು ಸಿಕ್ಕಿರಬಹುದು, ಅದರ ಆಧಾರದ ಮೇಲೆ ಹೇಳುವುದಾದರೆ ಇದುವರೆಗೆ ರೈತರಿಗೆ ಯಾವುದೇ ಲಾಭ ಈ ಫ್ಲೋರಿಕಲ್ಚರ್ ನಿಂದ ಸಿಕ್ಕಿಲ್ಲ. ಅದೇ ರೀತಿಯಲ್ಲಿ ಅಕ್ವಾ ಕಲ್ಚರ್ ಬಗ್ಗೆ ಮಾನ್ಯ ಕೃಷಿ ಮಂತ್ರಿಗಳು ಬಹಳ ಒತ್ತಿ ಹೇಳಿದ್ದಾರೆ. ಆದರೆ ಬಹಳ ಭೀಕರವಾದ ಪರಿಣಾಮವಾಗಿದ್ದು ಇದರಲ್ಲಿ ನಾವು ನೆಗೆಟೀವ್ ಗ್ರೋತ್ ಆಗಿರುವುದನ್ನು ನೋಡುತ್ತಿದ್ದೇವೆ.

ಇನ್ನು ಕೃಷಿ ರಂಗದಲ್ಲಿ ಬೇಕಾಗಿರತಕ್ಕಂಥ ಬಿತ್ತನೆ ಬೀಜಗಳ ಬಗ್ಗೆ ಹೇಳುವುದಾದರೆ, ಪತ್ರಿಕಾ ಹೇಳಿಕೆಗಳನ್ನು ಆಧಾರ ಮಾಡಿ ನೋಡುವುದಾದರೆ. ಈ ವರ್ಷದಲ್ಲಿ ಕಳಪೆ ಬೀಜಗಳನ್ನು ಸರಬರಾಜು ಮಾಡಿದ್ದಾರೆಂದು ರಾಜ್ಯ ಪ್ರತಿಯೊಂದು ಜಿಲ್ಲೆಯಲ್ಲಿಯೂ ಹೋರಾಟ ನಡೆಯುವಂಥಾದ್ದು ತಮ್ಮ ಗಮನಕ್ಕೆ ಬಂದಿದೆ. ಈಗಾಗಲೇ ಈ ಸದನದಲ್ಲಿ ಕೂಡ ಇದರ ಬಗ್ಗೆ 2-3 ಸಲ ಚರ್ಚೆ ಆಗಿದೆ. ಆದರೆ ಏಕೋ ಏನೋ ಈ ವರ್ಷ ಅಧಿಕಾರಿಗಳು ಹೇಳಿದ್ದನ್ನೇ ನಂಬಿ ಎಲ್ಲೂ ಕಳಪೆ ಬೀಜ ಸರಬರಾಜು ಆಗಿಲ್ಲ, ನಾವು ಸರಬರಾಜು ಮಾಡಿಲ್ಲ, ಮತ್ತು ಖಾಸಗಿಯವರು ಸರಬರಾಜು ಮಾಡಿಲ್ಲ ಎನ್ನತಕ್ಕಂಥ ತೀರ್ಮಾನಕ್ಕೆ ಶ್ರೀಮಾನ್ ಬೈರೇಗೌಡರು ಬಂದಿದ್ದಾರೆ. ಇದು ಸಂಪೂರ್ಣವಾಗಿ ವಾಸ್ತವಾಂಶಕ್ಕೆ ದೂರವಾಗಿರತಕ್ಕಂಥ ವಿಷಯವಾಗಿದೆ. ಖಾಸಗಿ ಕಂಪನಿಯವರು ಮತ್ತು ಖಾಸಗಿ ವ್ಯಾಪಾರಸ್ಥರು 100ಕ್ಕೆ 80 ಭಾಗದಷ್ಟು ಕಳಪೆ ಬಿತ್ತನೆ ಬೀಜಗಳನ್ನು ರೈತರಿಗೆ ಕೊಟ್ಟು ಸಂಪೂರ್ಣವಾಗಿ ರೈತರನ್ನು ನಾಶಮಾಡಿರತಕ್ಕಂಥ ಪ್ರವೃತ್ತಿಯನ್ನು ನಾವು ಇವತ್ತು ನೋಡುತ್ತಿದ್ದೇವೆ. ಬಳ್ಳಾರಿಯ ಕಾರ್ಗಿಲ್ ಕಂಪನಿಯರು ಕೊಟ್ಟಿರತಕ್ಕಂಥ ಕಳಪೆ ಬೀಜ ಮತ್ತು ಬೆಳೆಯದೇ ಇರತಕ್ಕಂಥ ಬೀಜಗಳನ್ನು ಕೊಟ್ಟಿರುವುದಕ್ಕೆ ಅಲ್ಲಿಯ ರೈತರು ಪ್ರತಿಭಟನೆ ಮಾಡಿರತಕ್ಕಂಥಾದ್ದು ಮಾನ್ಯ ಎಂ.ಪಿ. ಪ್ರಕಾಶ್‌ರವರಿಗೆ ಕೂಡ ಗೊತ್ತಿದೆ. ಹಾಗೆಯೇ ಉತ್ತರ ಕರ್ನಾಟಕ ಭಾಗದಲ್ಲಿ ಬೆಳಗಾಂ, ಧಾರವಾಡ, ರಾಯಚೂರು, ಗುಲ್ಬರ್ಗಾ, ಬೀದರ್ ಜಿಲ್ಲೆಗಳಲ್ಲಿ ಆ ಕಂಪನಿಯವರು ಮಾರಿರತಕ್ಕಂಥ ಕಳಪೆ ಬೀಜದಿಂದ ಆ ಜಿಲ್ಲೆಗಳಲ್ಲಿನ ರೈತರು ನಷ್ಟ ಹೊಂದಿ ಕಂಗಾಲಾಗಿದ್ದಾರೆ. ಇದರ ಬಗ್ಗೆ ನನ್ನ ಹತ್ತಿರ ದಾಖಲೆಗಳು ಕೂಡ ಇವೆ. ಅಲ್ಲಿ ಬೆಳೆ ಬರದೆ ರೈತರು ತೀವ್ರವಾದಂಥ ತೊಂದರೆಗೆ ಒಳಗಾಗಿದ್ದಾರೆ. ಅದರ ಬಗ್ಗೆ ಸರ್ಕಾರ ಕೂಡ ಏನು ಕ್ರಮವನ್ನು ಕೈಗೆದುಕೊಳ್ಳಲಿಲ್ಲ. ಅದರೆ ಹಿಂದಿನ ವರ್ಷ ಮಾನ್ಯ ಬೈರೇಗೌಡರು ಗುಲ್ಬರ್ಗಾ ಜಿಲ್ಲೆಗೆ ಹೋಗಿ ಕಳಪೆ ಬೀಜವನ್ನು ಮಾರಾಟ ಮಾಡಿದಂಥ ವರ್ತಕರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದಾಗ, ಮಾನ್ಯ ಮಂತ್ರಿಗಳ ವಿರುದ್ಧ ಕಳಪೆ ಬೀಜ ಮಾರಾಟ ಮಾಡಿದಂಥ ವ್ಯಾಪಾರಸ್ಥರು ಗುಲ್ಬರ್ಗಾ ಪೂರ್ತಿ ಬಂದ್ ಮಾಡಿರುವುದು ಗೊತ್ತಿರತಕ್ಕಂಥ ವಿಚಾರವಾಗಿದೆ. ಆದರೆ ದಿಟ್ಟವಾದ ಕ್ರಮವನ್ನು ಸಂಬಂಧಪಟ್ಟ ಮಾನ್ಯ ಮಂತ್ರಿಗಳು ತೆಗೆದುಕೊಂಡಿದ್ದಾರೆ. ಹಿಂದಿನ ವರ್ಷಕ್ಕಿಂತ ಇವತ್ತು ಏನಾದರೂ ಸುಧಾರಣೆ ಆಗಿದೆಯೇ ಎಂದು ನೋಡುವುದಾದರೆ ಇಲ್ಲ ಎಂದು ಹೇಳಬೇಕಾಗುತ್ತದೆ. ಮಾನ್ಯ ಶರಣಬಸಪ್ಪ ದರ್ಶನಾಪುರ ಅವರ ಕ್ಷೇತ್ರವಾದ ಶಹಾಪುರದಲ್ಲಿ ಇವತ್ತು ಬಹುಶ: ಕಳಪೆ ಬೀಜದ ವ್ಯವಹಾರದ ಬಗ್ಗೆ ಅಲ್ಲಿ ಬಂದ್ ನಡೆಯುತ್ತಿದೆ. ಅದರೆ ದುರಾದೃಷ್ಟವಶಾತ್ ಅಲ್ಲಿಗೆ

ಹೋಗಿದ್ದಂಥ ಕೃಷಿ ವಿಶ್ವವಿದ್ಯಾಲಯದ ಬೀಜ ವಿಜ್ಞಾನಿಗಳು 'ನಾವು ಒಳ್ಳೆಯ ಬೀಜಗಳನ್ನು ಕೊಟ್ಟಿದ್ದೇವೆ' ಎಂದು ಸರ್ಟಿಫಿಕೇಟ್ ಕೊಡುತ್ತಾರೆ. ಹಾಗೆಯೇ ಮಾನ್ಯ ಕೃಷಿ ಮಂತ್ರಿಗಳು ಈ ಸದನದಲ್ಲಿ ಹೇಳಿಕೆಯನ್ನು ಕೊಡತಕ್ಕಂಥ ಸಂದರ್ಭದಲ್ಲಿ 'ಅಲ್ಲಿ ತೇವಾಂಶ ಕಡಿಮೆ ಇದೆ, ಮಳೆ ಕಡಿಮೆ ಆಗಿದೆ, ನೀರು ಕಡಿಮೆ ಆಗಿದೆ, ಅದಕ್ಕೋಸ್ಕರ ಬೆಳೆ ನಾಶವಾಗಿದೆ' ಎಂದು ಹೇಳಿದ್ದಾರೆ. ಆದರೆ ನಿಮ್ಮ ಸರ್ಕಾರದ ಅಧೀನದಲ್ಲಿರತಕ್ಕಂಥ ಮೌಲ್ಯಮಾಪನ ಇಲಾಖೆಯವರು ರೈನ್ ಗೇಟ್‌ನ ಮಾಹಿತಿ ಪ್ರಕಾರ ರೆವಿನ್ಯೂ ಇಲಾಖೆಯವರು ಕೊಟ್ಟಿರತಕ್ಕಂಥ ಮಾಹಿತಿ ಪ್ರಕಾರ ಆ ಪ್ರದೇಶದಲ್ಲಿ ಸಾಕಷ್ಟು ಮಳೆ ಆಗಿದೆ ಎನ್ನತಕ್ಕಂಥ ಅಂಶವನ್ನು ಕೊಟ್ಟಿದ್ದರು. ಹಾಗಾದರೆ ರೈತರು ಯಾರನ್ನು ದೂಷಣೆ ಮಾಡಬೇಕು? ಎರಡೂ ಕೂಡ ನಿಮ್ಮ ಇಲಾಖೆಗೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಹೇಳಿದರೆ ಕಳಪೆ ಬಿತ್ತನೆ ಬೀಜದಿಂದ ಬೆಳೆ ನಾಶವಾಗಿದೆ ಎಂದು ಅವರು ಹೇಳುತ್ತಾರೆ. ಯಾವ ರೀತಿಯಲ್ಲಿ ರೈತರು ಇದನ್ನು ಸರಿಪಡಿಸುವುದು ಎನ್ನುವುದರ ಬಗ್ಗೆ ಸರ್ಕಾರದ ಕಡೆಯಿಂದ ಉತ್ತರ ಬರಬೇಕು. ಮಾನ್ಯ ಬೈರೇಗೌಡರು, ಕೃಷಿ ಮಂತ್ರಿಗಳು ಇದರ ವ್ಯಾಪ್ತಿಗೆ ಕೃಷಿ ವಿಶ್ವವಿದ್ಯಾಲಯ ಬರುತ್ತದೆ. ನನ್ನ ಹತ್ತಿರ ಒಂದು ದಾಖಲೆ ಇದೆ. ಅಲ್ಲಿ ಬೋರ್ಡ್ ಆಫ್ ರೀಜೆನ್ಸಿ ಇದೆ, ಅದರಲ್ಲಿ ಸರ್ಕಾರವೇ ನಾಮಕರಣ ಮಾಡಿರತಕ್ಕಂಥ ಸದಸ್ಯರು ಇದ್ದಾರೆ. ವಿಶ್ವವಿದ್ಯಾಲಯದಲ್ಲಿ ಮತ್ತು ಕೃಷಿ ಇಲಾಖೆಗೆ ಸಂಬಂಧಪಟ್ಟ ಹಾಗೆ ಅಲ್ಲಿ ಹೇಗೆ ಅಧಿಕಾರ ದುರುಪಯೋಗವಾಗುತ್ತಿದೆ ಎನ್ನುವ ವಿಚಾರವಾಗಿ ಹೇಳುವುದಕ್ಕೆ ಬಯಸುತ್ತೇನೆ. ಬೋರ್ಡ್‌ನಲ್ಲಿರತಕ್ಕಂಥ ಒಬ್ಬ ಮೆಂಬರ್ ಒಂದೊಂದು ತಿಂಗಳಲ್ಲಿ ಎಷ್ಟೆಷ್ಟು ಕಿ.ಮೀ. ದೂರ ಪ್ರವಾಸ ಮಾಡಿದ್ದಾರೆ ಎನ್ನುವುದನ್ನು ಹೇಳುತ್ತೇನೆ. ಜನವರಿಯಲ್ಲಿ 2,889 ಕಿ.ಮೀ., ಫೆಬ್ರುವರಿಯಲ್ಲಿ 3,144 ಕಿ.ಮೀ. ಮಾರ್ಚ್ ನಲ್ಲಿ 3,055 ಕಿ.ಮೀ. ಏಪ್ರಿಲ್ ನಲ್ಲಿ 3,043 ಕಿ.ಮೀ. ಮೇ. ತಿಂಗಳಲ್ಲಿ 5,009 ಕಿ.ಮೀ. ದೂರ ಪ್ರವಾಸ ಮಾಡಿದ್ದಾರೆ. ಈ ಮೆಂಬರ್ ಕಾನೂನಿನ ಪ್ರಕಾರ ತಿಂಗಳಿಗೆ ಎಷ್ಟು ಕಿ.ಮೀ. ಹೋಗಬಹುದು? ಯಾವ ಯಾವ ಕೆಲಸಕ್ಕೆ ಹೋಗಬಹುದು, ಎಲ್ಲೆಲ್ಲಿ ಹೋಗಬಹುದು? ಎನ್ನತಕ್ಕಂಥದನ್ನು ಮಾನ್ಯ ಬೈರೇಗೌಡರು ಹೇಳಬೇಕಾಗುತ್ತದೆ. ಅವರು ಎಂ.ವಿ. ಪುಸ್ತಕದಲ್ಲಿ ಏನು ಬರೆದಿಟ್ಟಿದ್ದಾರೆ, ಹೇಗೆ ಬರೆಯುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ಆದರಲ್ಲಿ ಒಬ್ಬ ಮೆಂಬರ್ ಪ್ರವಾಸ ಹೋಗಿಯೇ ಇಲ್ಲ. ಅದೇಕೋ ಗೊತ್ತಿಲ್ಲ. ಕೆಲವರು ಪ್ರವಾಸ ಹೋಗಿದ್ದರೂ ಕೂಡ 200 ಕಿಮಿ. 300 ಕಿಮಿ. 800 ಕಿಮಿ ಹೋಗಿದ್ದಾರೆ. ಇನ್ನೊಬ್ಬ ಮೆಂಬರ್ ಜನವರಿಯಲ್ಲಿ 1,512 ಕಿಮೀ. ಫೆಬ್ರುವರಿ ತಿಂಗಳಿನಲ್ಲಿ 1,252 ಕಿಮೀ ಮಾರ್ಚಿನಲ್ಲಿ 1,569 ಕಿಮೀ. ಏಪ್ರಿಲ್ ನಲ್ಲಿ 2,379 ಕಿಮೀ. ಪ್ರವಾಸ ಹೋಗಿದ್ದಾರೆ.

Mr. SPEAKER :— What is the point you are trying to drive home? ತಾವು ಹೇಳಿದಂತೆ ಆ ಮೆಂಬರ್ ಅಷ್ಟು ಕಿ.ಮಿ. ಪ್ರವಾಸ ಹೋಗಿದ್ದಾರೆ. ಅವರು ಇಷ್ಟೇ ಕಿಮೀ. ಟ್ರಾವಲ್ ಮಾಡಬೇಕೆಂದು ಏನಾದರೂ ಸೀಲಿಂಗ್ ಇದೆಯೇ? ಇದ್ದರೆ ಅದು ಏನು ಎಂದು ಹೇಳಿ.

ಶ್ರೀ ಜಿ.ವಿ. ರಾಮರೆಡ್ಡಿ :— ಹೌದೌದು, ಇದೆ. ನನ್ನ ತಿಳುವಳಿಕೆಯ ಪ್ರಕಾರ ಮೀಟಿಂಗ್‌ಗೆ ಹೋಗಬೇಕಾದರೆ ಕಾರನ್ನು ಬಹಸಬಹುದು, ಅವರು ಇರತಕ್ಕ ಜಾಗದಿಂದ ಅಂದರೆ ಗೆಸ್ಟ್ ಹೌಸ್‌ನಿಂದ ಅಥವಾ ಮನೆಯಿಂದ ಮೀಟಿಂಗ್‌ಗೆ ಹೋಗಲಿಕ್ಕೆ ಅವರು ಕಾರನ್ನು ಬಳಸಬಹುದು, ಅಥವಾ ಅಧಿಕೃತ ಪ್ರವಾಸ ಅಂದರೆ ಕಮಿಟಿ ವತಿಯಿಂದ ಅಥವಾ ಸಬ್ ಕಮಿಟಿಯಿಂದ ಪ್ರವಾಸಕ್ಕೆ ಹೋಗತಕ್ಕಂಥ ಸಂದರ್ಭದಲ್ಲಿ ಕಾರನ್ನು ಬಳಸಬಹುದು. ಅಥವಾ ಮೀಟಿಂಗ್ ಜಾಗದಿಂದ ಮನೆಗೆ ಮನೆಗೆ ಅಥವಾ ಬಸ್ ಸ್ಟಾಂಡ್‌ಗೆ ಡ್ರಾಪ್ ಮಾಡಲಿಕ್ಕೆ ಅವರು ಕಾರನ್ನು ಬಳಸಬಹುದು. ಆದರೆ 5,009 ಕಿಮೀ. ಅಷ್ಟು ದೂರ ಪ್ರವಾಸ ಮಾಡುವುದೆಂದರೇನು?

ಅಧ್ಯಕ್ಷರು :— ಮಾನ್ಯ ರೆಡ್ಡಿಯವರೇ, ಯೂನಿವರ್ಸಿಟಿ ಅಂದರೆ ಅಲ್ಲಿಗೆ ಲೆಕ್ಕ ಪರಿಶೀಲಸಲಿಕ್ಕೆ ಆಡಿಟರ್ಸ್ ಇರುತ್ತಾರೆ, ಇಂಟರ್ನಲ್ ಆಡಿಟ್ ಇರುತ್ತದೆ, ನಂತರ ಅದು ಏ.ಜಿ. ಮುಂದೆ ಹೋಗುತ್ತದೆ, ನಂತರ ಸಿ.ಎ.ಜಿ.ಗೆ ಹೋಗುತ್ತದೆ. ಎಲ್ಲಾದರೂ ಮಹತ್ವದ ಆಕ್ಷೇಪಣೆ ಇದೆಯೇ? ಯಾವ ನಿಯಮದ ಪ್ರಕಾರ ಅವರು ಪ್ರವಾಸ ಮಾಡುತ್ತಾರೆ, ಅವರು ಹೀಗೆಯೇ ಹೋಗಬೇಕೆಂದು ಏನಾದರೂ ಇದೆಯೇ? ನೀವು ಈ ತರಹ ಎಲ್ಲಾ ಡೀಟೈಲ್ಸ್ ಕೊಡುತ್ತಾ ಮಾತನಾಡಿ, ಇಲ್ಲದಿದ್ದರೆ ಅದು ಜನರಲ್ ಸ್ಪೀಚ್ ಆಗುತ್ತದೆ. ಕೆಲವರು 300 ಕಿ.ಮೀ. ಪ್ರವಾಸ ಹೋಗಿದ್ದಾರೆ, ಇನ್ನೊಬ್ಬರು 4,000 ಕಿ.ಮೀ. ಪ್ರವಾಸ ಹೋಗಿದ್ದಾರೆ ಎಂದು ಹೇಳಿದಿರಿ. ಈಗ ಸರ್ಕಾರದಲ್ಲಿ 40 ಜನ ಮಂತ್ರಿಗಳು ಇದ್ದಾರೆ. ಕೆಲವರು ಜಾಸ್ತಿ ಕಿ.ಮೀ. ಓಡಾಡುತ್ತಾರೆ. ಕೆಲವರು ಕಡಿಮೆ ಕಿ.ಮೀ. ದೂರ ಓಡಾಡುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಮಾನ್ಯ ಅಧ್ಯಕ್ಷರೆ, ನನ್ನ ಗಮನಕ್ಕೆ ಬಂದಿದ್ದನ್ನು ನಾನು ಹೇಳುತ್ತೇನೆ. ಆ ಮೆಂಬರ್‌ಗಳಿಗೆ ಅಷ್ಟೊಂದು ದೂರು ಹೋಗುವುದಕ್ಕೆ ನಿಯಮಾವಳಿಗಳ ಪ್ರಕಾರ ಅವಕಾಶವಿದೆಯೇ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು. ಏಕೆಂದರೆ ಇದು ಮಾನ್ಯ ಕೃಷಿ ಮಂತ್ರಿಗಳ ಕಂಟ್ರೋಲ್‌ನಲ್ಲಿ ಬರುತ್ತದೆ. ಅವರು ಅದನ್ನು ಹೇಳಬೇಕಾಗುತ್ತದೆ.

MR. SPEAKER :— He is only the Pro-Chancellor.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಹೌದು. ಆ ಯೂನಿವರ್ಸಿಟಿಗೆ ಮಾನ್ಯ ಮಂತ್ರಿಗಳು ಪ್ರೊಚಾನ್ಸಲರ್ ಆಗಿದ್ದಾರೆ. ಅಲ್ಲಿಯ ಮೆಂಬರ್ಸ್‌ನ್ನು ನಾಮಕರಣ ಮಾಡಿರತಕ್ಕಂಥವರು ಈ ಸರ್ಕಾರ.

MR. SPEAKER :— It does not come under his control.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಇನ್ನು ಯಾರ ಕಂಟ್ರೋಲ್‌ಗೆ ಬರುತ್ತದೆ? ಹೇಳಿ.

ಅಧ್ಯಕ್ಷರು :— ಈಗ ಸರ್ಕಾರದಿಂದ, ನಮ್ಮ ಲೆಜಿಸ್ಲೇಚರ್‌ನಿಂದ ಕೆಲವರು ಮೆಂಬರ್ಸ್‌ನ್ನು ರೆಗ್ಯುಲರ್ ಆಗಿ ನಮ್ಮ ಬೇರೆ ಬೇರೆ ಯೂನಿವರ್ಸಿಟಿಗೆ ಸೆನೆಟ್ ಮೆಂಬರ್ ಆಗಿ, ಸಿಂಡಿಕೇಟ್ ಮೆಂಬರ್ ಆಗಿ ನಾಮಿನೇಟ್ ಮಾಡುತ್ತೇವೆ. Does that mean the University comes under the control?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಮಾನ್ಯ ಅಧ್ಯಕ್ಷರೆ, ಯೂನಿವರ್ಸಿಟಿಯಿಂದ ಒಂದು ಸರ್ಕ್ಯುಲರ್ ಇದೆ. ಅದನ್ನು ನಾಮ ಇಲ್ಲಿ ಓದುತ್ತೇನೆ.

``Use of university vehicles by the Board member - non officials."

"I am directed to enclose herewith a copy of the letter No. So & So by the Estate Officer pertaining to the use of University vehicle by the Board Members. Further, in view of the letters received from the Governor's office and also from the Principal Secretary, through the Government A & H Department, enquiring among other things about the use of vehicles by one of the Board Members, I am once again directed to request the Hon'ble Board Members to use the University vehicles by following the procedure as indicated in the letter dated 4.10.95 referred above. When the vehicle are required, Hon'ble members may send an indent either in writing or over phone to the Estate Officers for allotment,. the members are requested to record the place and purpose and sign the log book of the vehicles after use. This procedure will not only satisfy the requirement of audit section but also check the misuse of vehicles by others when once the log-book is closed." This is the circular. ಅವರ ಪ್ರಕಾರ ಲಾಗ್ ಬುಕ್ ಯೂಸ್ ಮಾಡಿಲ್ಲ. ಈ ಸರ್ಕ್ಯುಲರ್ ಪ್ರಕಾರ ಅವರು ಯೂಸ್ ಮಾಡಲಿಕ್ಕೆ ಪರಿಮಿತಿ ಇದೆ. ಹಾಗಾಗಿ ಅಲ್ಲಿ ಹೇಗೆ ಮಿಸ್‌ಯೂಸ್ ಆಗುತ್ತಿದೆ ಎಂದು ನನಗೆ ಗೊತ್ತಿರುವ ಮಾಹಿತಿಯನ್ನು ಹೇಳುತ್ತಿದ್ದೇನೆ. ಅದರ ಬಗ್ಗೆ ದಯವಿಟ್ಟು ಮಾನ್ಯ ಕೃಷಿ ಸಚಿವರು ಉತ್ತರ ಕೊಡಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ (ಮಾನ್ಯ ಕೃಷಿ ಸಚಿವರು) :— ಮಾನ್ಯ ಅಧ್ಯಕ್ಷರೆ, ಕೃಷಿ ವಿಶ್ವವಿದ್ಯಾನಿಲಯದ ಆಡಳಿತ ಮಂಡಳಿಯ ಸದಸ್ಯರಾಗಿರತಕ್ಕಂಥವರು ವಿಶ್ವವಿದ್ಯಾಲಯದ ಕಾರು ಅಥವಾ ವ್ಯಾನ್‌ನ್ನು ಏನಾದರೂ ಅಧಿಕೃತವಾದ ಉದ್ದೇಶಕ್ಕೆ ಅಲ್ಲದೆ ಸ್ವಂತಕ್ಕೋಸ್ಕರ ಬಳಸಿಕೊಂಡಿದ್ದರೆ ಅವರಿಂದ ಬಾಡಿಗೆಗೆ ಎಷ್ಟು ಕೊಡುತ್ತಿದ್ದರೋ ಅಷ್ಟು ಹಣವನ್ನು

ವಸೂಲಿ ಮಾಡತಕ್ಕಂಥದ್ದು ಎಂದು ನಾವು ವಿಶ್ವವಿದ್ಯಾಲಯಕ್ಕೆ ಸೂಚನೆ ಕೊಡುತ್ತೇವೆ. ಅದು ವಿಶ್ವವಿದ್ಯಾನಿಲಯದ ಕಾರಿರಬಹುದು, ಬೇರೆ ವಾಹನಗಳಿರಬಹುದು, ಅಧಿಕೃತವಾದ ಕಾರ್ಯಕ್ರಮಗಳೇನಿರುತ್ತವೆ ಅವುಗಳಿಗೆ ಮಾತ್ರ ಅವುಗಳನ್ನು ಬಳಸುವುದಕ್ಕೆ ನಿಯಮಾವಳಿಯಲ್ಲಿ ಅವಕಾಶವಿದೆ. ಅಂದರೆ, ಸಭೆ ಕರೆದಾಗ, ಅಫಿಷಿಯಲ್ ಟೂರ್ ಹೋದ ಸಂದರ್ಭದಲ್ಲಿ ಕಾರ್ ಅಥವಾ ವ್ಯಾನ್‌ನ್ನು ಬಳಸಬಹುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಶ್ರೀ ಜಿ. ಆನಂದ್ ಎಂಬುವವರು ಜನವರಿಯಲ್ಲಿ 2,889, ಫೆಬ್ರವರಿಯಲ್ಲಿ 3,164, ಮಾರ್ಚ್‌ನಲ್ಲಿ 3,055, ಏಪ್ರಿಲ್‌ನಲ್ಲಿ 3,043, ಮೇ ತಿಂಗಳಿನಲ್ಲಿ 5,009 ಕಿ.ಮೀಗಳು ಓಡಾಡಿದ್ದಾರೆ. ಇನ್ನೊಬ್ಬ ಸದಸ್ಯರು ಜನವರಿಯಲ್ಲಿ 1,512, ಫೆಬ್ರವರಿಯಲ್ಲಿ 1,252, ಮಾರ್ಚ್‌ನಲ್ಲಿ 1,569, ಏಪ್ರಿಲ್‌ನಲ್ಲಿ 2,379, ಮೇ ತಿಂಗಳಿನಲ್ಲಿ 2,843 ಕಿ.ಮೀಗಳು ಓಡಾಡಿದ್ದಾರೆ.

ಶ್ರೀ ಸಿ. ಬೈರೇಗೌಡ :— ಅಲ್ಲಿರುವ ಆಡಳಿತ ಮಂಡಲಿ ಸದಸ್ಯರು ವಿಶ್ವವಿದ್ಯಾನಿಲಯದ ವಾಹನಗಳನ್ನು ಏನಾದರೂ ಅಧಿಕೃತ ಉದ್ದೇಶಕ್ಕಲ್ಲದೆ ಸ್ವಂತಕ್ಕಾಗಿ ಬಳಸಿಕೊಂಡಿದ್ದರೆ, ಅವರಿಂದ ಆ ಹಣವನ್ನು ವಸೂಲಿ ಮಾಡುವುದಕ್ಕೆ ವಿಶ್ವವಿದ್ಯಾನಿಲಯಕ್ಕೆ ನಾವು ಸೂಚನೆ ಕೊಡುತ್ತೇವೆ. ಸ್ವಂತ ಕಾರ್ಯಗಳಿಗೆ ಬಳಸಿಕೊಳ್ಳುವುದು ಏನಿದೆ ಅದು ದುರುಪಯೋಗವಾಗುತ್ತದೆ. ಆ ರೀತಿಯಾದ ತಿಳುವಳಿಕೆಯನ್ನು ನಾವು ವಿಶ್ವವಿದ್ಯಾನಿಲಯಕ್ಕೆ ತಿಳಿಸುತ್ತೇವೆ. ಇದು ಕಾನೂನಿಗೆ ವಿರುದ್ಧವಾಗಿ ಬಳಕೆಯಾಗಿದ್ದರೆ, ಅದರ ಬಗ್ಗೆ ಗಮನಿಸುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಕಾನೂನಿಗೆ ವಿರುದ್ಧವಾಗಿ ಬಳಕೆಯಾಗಿದೆ ಎನ್ನುವುದಕ್ಕೆ ನನ್ನ ಹತ್ತಿರ ಬೇರೆ ಸದಸ್ಯರ ಲಿಸ್ಟ್ ಇದೆ. ಕೆಲವರು 120, 140, 142 ಕಿ.ಮೀ. ಓಡಾಡಿದ್ದಾರೆ. ಇವರು 5 ಸಾವಿರ ಕಿ.ಮೀ. ಓಡಾಡಿದ್ದಾರೆಂದರೇನು?

ಶ್ರೀ ಸಿ. ಬೈರೇಗೌಡ :— ಅವರಿಂದ ಆ ಹಣವನ್ನು ವಸೂಲು ಮಾಡಲು ಕ್ರಮ ತೆಗೆದುಕೊಳ್ಳುತ್ತೇವೆ. ಆ ರೀತಿಯಾಗಿ ಸೂಚನೆಯನ್ನು ವಿಶ್ವವಿದ್ಯಾನಿಲಯಕ್ಕೆ ಕೊಡುತ್ತೇವೆ.

ಅಧ್ಯಕ್ಷರು :— ತರಿಸಿ ನೋಡಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ :— 5 ಸಾವಿರ ಕಿ.ಮೀ. ಓಡಾಡಿ ಇದೀ ಕೃಷಿ ಕ್ಷೇತ್ರದಲ್ಲಿ ಕೆಲಸ ಮಾಡುವ ಕಾರ್ಯಕ್ರಮಗಳೇನಾದರೂ ಇದ್ದರೆ ಪರವಾಗಿಲ್ಲ.

ಶ್ರೀ ಸಿ. ಬೈರೇಗೌಡ :— ಅವರು ಸಭೆಗಳಿಗೆ ಹೋಗಬೇಕಾಗುತ್ತದೆ. ಏನಾದರೂ ಅಧಿಕೃತವಾದ ಸಮಾರಂಭ ಮಾಡಿದರೆ, ಅದಕ್ಕೆ ಹೋಗಬೇಕಾಗುತ್ತದೆ. ಅವರ ವ್ಯಾಪ್ತಿಯಲ್ಲಿ ಬರುವ ಕೃಷಿ ಕ್ಷೇತ್ರಗಳಿವೆ. ಅಲ್ಲೇನು ನಡೆಯುತ್ತಿದೆ ಎಂಬ ಬಗ್ಗೆ ಅವರು ಅಧಿಕೃತವಾದ ಟೂರ್ ಹೋಗಬೇಕಾಗುತ್ತದೆ. ಇವಿಷ್ಟನ್ನು ಬಿಟ್ಟು, ಮತ್ತೇನಾದರೂ ಖಾಸಗಿ ಉದ್ದೇಶಕ್ಕಾಗಿ ಅವರು ಕಾರ್‌ಅನ್ನು ಬಳಸಿಕೊಂಡಿದ್ದರೆ, ಅವರಿಂದ ಆ ಹಣವನ್ನು ವಸೂಲು ಮಾಡೋಣ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ :— ಮಾನ್ಯ ಬೈರೇಗೌಡರು ಕೃಷಿ ಮಂತ್ರಿಗಳಾದ ಮೇಲೆ, ಸಾಯಿಲ್ ಕಪ್ಸರ್‌ವೇಷನ್ ಇಲಾಖೆ ಮತ್ತು ಕೃಷಿ ಇಲಾಖೆಯನ್ನು ಒಂದು ಮಾಡಿದರು. ಅವರ ಉದ್ದೇಶವೇನಿತ್ತೆಂದರೆ, ಅದರಲ್ಲಾಗುವ ದುರುಪಯೋಗ ತಡೆಯುವ ಉದ್ದೇಶವಿದ್ದು, ಎರಡು ರೀತಿಯಾದ ಅಧಿಕಾರ ಬೇಡವೆಂದು, ಒಂದೇ ರೀತಿಯಾದ ಅಧಿಕಾರವನ್ನು ಒಬ್ಬರ ವ್ಯಾಪ್ತಿಗೆ ತರಬೇಕೆಂಬ ಉದ್ದೇಶವಿತ್ತು. ಈಗ ಮಾನ್ಯ ಬೈರೇಗೌಡರು ಹೇಳಬೇಕು, ಕೆಲವು ಕಡೆ ಅಧಿಕಾರ ದುರುಪಯೋಗವಾಗಿದೆ ಎಂದು ಕ್ರಿಮಿನಲ್ ಕೇಸ್ ಹಾಕಿಸಿದ್ದರು. ಅವರು ಇವತ್ತು ರಾಜ್ಯದ ಜನತೆಗೆ ಪ್ರಾಮಾಣಿಕವಾಗಿ ಹೇಳಬೇಕಾಗಿದೆ, ಅವುಗಳನ್ನು ಮರ್ಜ್ ಮಾಡಿರುವುದರಿಂದ, ಒಟ್ಟಾರೆ ರಿಸಲ್ಟ್ ಏನಾಗಿದೆ? ಅದರಿಂದ ಯಾವ ರೀತಿ ಯಾವ ಪ್ರಯೋಜನವಾಗಿದೆ? ನನಗೆ ತಿಳಿದಿರುವ ಪ್ರಕಾರ, ಹಿಂದೆ ಹಲವರು ಹಂಚಿಕೊಳ್ಳುತ್ತಿದ್ದುದನ್ನು ಈಗ ಕೆಲವೇ ಜನರು ಹಂಚಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಮೊದಲು ಕೆಲವರು, ಈಗ ಹಲವರು. ಈ ಮಣ್ಣು ಸಂರಕ್ಷಣೆ ಕಾರ್ಯಕ್ರಮವೂ ನಡೆಯಲಿಲ್ಲ, ಹಣ ರಕ್ಷಣೆ ಮಾಡುವ ಕಾರ್ಯಕ್ರಮವೂ ನಡೆಯಲಿಲ್ಲವೆಂಬ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಈಗಲೂ ಕೂಡ ಅದನ್ನು ತಡೆಯಲು ಮಾನ್ಯ ಬೈರೇಗೌಡರೇನಾದರೂ ಮನಸ್ಸು ಮಾಡಿರುತ್ತಾರೆಯೇ? ಕೋಟ್ಯಾಂತರ ರೂಪಾಯಿಗಳು ಭೂಸಾರ ಸಂರಕ್ಷಣೆ ಇಲಾಖೆಯಲ್ಲಿ ದುರುಪಯೋಗವಾಗಿದೆ. ಅದನ್ನು ತಡೆಯಲು ಮಾನ್ಯ ಬೈರೇಗೌಡರು ಪ್ರಯತ್ನಿಸಿದರೂ ಸಾಧ್ಯವಾಗಿಲ್ಲ. ಲೋಪದೋಷವೆಲ್ಲಿದೆ ಎಂಬುದನ್ನು ಮಾನ್ಯ ಬೈರೇಗೌಡರು ತಮ್ಮ ಅನುಭವ ಮುಖಾಂತರ ಹೇಳಬೇಕು. ಅವರ ಭಾವನೆಗಳು ಬೇರೆ ಇರಬಹುದು, ಅಲೋಚನೆ ಒಳ್ಳೆಯದಿರಬಹುದು, ಆಲೋಚನೆಯಲ್ಲಿ ಪ್ರಾಮಾಣಿಕತೆ ಇದೆ ಎಂಬುದರಲ್ಲಿ ಬೇರೆ ಮಾತಿಲ್ಲ. ಆದರೆ, ಲೋಪವೆಲ್ಲಿದೆ ಎಂಬುದನ್ನು ಮಾನ್ಯ ಬೈರೇಗೌಡರು ತಮ್ಮ ನಾಲ್ಕೂವರೆ ವರ್ಷಗಳ ಅನುಭವದಿಂದ ರಾಜ್ಯದ ಜನತೆಗೆ ಹೇಳಬೇಕು. ಕೃಷಿ ಇಲಾಖೆ ಇವತ್ತು ನಮ್ಮ ರಾಜ್ಯದ ಜೀವನಾಡಿ. ಆ ಕೃಷಿ ಇಲಾಖೆ ಸರಿಯಾದ ದಿಕ್ಕಿನಲ್ಲಿ ಅಭಿವೃದ್ಧಿಯಾಗದೇ ಹೋದರೆ, ಕರ್ನಾಟಕ ರಾಜ್ಯದ ಅಭಿವೃದ್ಧಿ ಮಾಡಲು ಸಾಧ್ಯವಿಲ್ಲ. ಮೊದಲನೆಯದಾಗಿ, ಆಹಾರ ಸಾಮಗ್ರಿಗಳ ಉತ್ಪಾದನೆ ಹೆಚ್ಚಾಗಬೇಕು, ಸಾಮಾನ್ಯ ಜನರು ಆಹಾರ ಸಾಮಗ್ರಿಗಳನ್ನು ಕೊಂಡುಕೊಳ್ಳುವ ಶಕ್ತಿ ಹೆಚ್ಚಾಗಬೇಕು.

ಎರಡನೆಯದಾಗಿ, ಭೂಮಿಯ ಸಂಬಂಧಗಳು ಹೆಚ್ಚಾಗಬೇಕು, ಭೂಮಿಯ ಬಳಕೆ ಪರಿಣಾಮಕಾರಿಯಾಗಬೇಕು. ಕೃಷಿ ರಂಗದಲ್ಲಿ ಬಹಳ ಮುಖ್ಯವಾಗಿ, ರೈತರ ಹಿತರಕ್ಷಣೆಯಾಗಬೇಕು. ಕೃಷಿ ಕಾರ್ಮಿಕರ ಹಿತರಕ್ಷಣೆಯಾಗಬೇಕಾಗಿದೆ. ಇದರಲ್ಲಿ ಯಾವುದಾದರೊಂದು ಮಾನ್ಯ ಬೈರೇಗೌಡರ ಕಾಲದಲ್ಲಿ ನಡೆದಿದ್ದರೆ ಅದನ್ನು ಅವರು ಹೇಳಬೇಕು. ನನಗೆ ಗೊತ್ತಿರುವ ಹಾಗೆ ಅದು ಯಾವುದೂ ಇಲ್ಲ. ರೈತರು ಇವತ್ತು ಬೀದಿಪಾಲಾಗುವುದನ್ನು ತಪ್ಪಿಸಲಿಲ್ಲ, ಟೊಮ್ಯಾಟೋ, ಅಲೂಗಡ್ಡೆ, ತರಕಾರಿ, ಮೆಣಸಿನಕಾಯಿಯನ್ನು ರೋಡಿಗೆ ಸುರಿಯುವುದನ್ನು ತಪ್ಪಿಸಲಿಲ್ಲ. ರೈತರ ಬವಣೆಯೇನಾದರೂ ತಪ್ಪಿದೆಯೇ? ಅದೇ ರೀತಿಯಲ್ಲಿ, ಇವತ್ತು ಕೃಷಿ ರಂಗದಲ್ಲಿ ವ್ಯಾಪಕವಾದ ಬದಲಾವಣೆ

ಏನಾದರೂ ಆಗಿದೆಯೇ? ಅದನ್ನು ಮಾನ್ಯ ಬೈರೇಗೌಡರು ಇವತ್ತು ಪ್ರಾಮಾಣಿಕವಾಗಿ ಹೇಳಬೇಕಾಗಿದೆ. ಏಕೆಂದರೆ, ಕೃಷಿ ರಂಗ ನಮ್ಮ ರಾಜ್ಯದ ಜೀವ ನಾಡಿ ಹಾಗೂ ಈ ರಾಜ್ಯದಲ್ಲಿನ ಒಟ್ಟಾರೆ ರೈತರ ಬದುಕು. ರಾಜ್ಯದಲ್ಲಿ ಶೇ.80 ರಷ್ಟು ಜನರು ಅದರ ಮೇಲೆಯೇ ಜೀವನ ಮಾಡುತ್ತಿದ್ದಾರೆ. ಅದರಲ್ಲಿ ಮೂಲಭೂತ ಬದಲಾವಣೆಯನ್ನು ಸರ್ಕಾರ ತರಲು ಸಾಧ್ಯವಿದೆ ಎಂಬ ಮಾತನ್ನು ನಾನು ಒಪ್ಪುವವನಲ್ಲ. ಅದು ಸಾಧ್ಯವಿಲ್ಲ. ಏಕೆಂದರೆ, ಇಡೀ ದೇಶ ಕೃಷಿ ರಂಗದ ಭಾಗವಾಗಿದೆ ಎನ್ನುವುದಕ್ಕೋಸ್ಕರ ಇಡಿ ಮೂಲಭೂತ ಬದಲಾವಣೆ ತರಲು ಆಗುವುದಿಲ್ಲ. ಆದರೆ, ಕೆಲವು ಅಂಶಗಳಲ್ಲಾದರೂ ಬದಲಾವಣೆ ತರಲಿಕ್ಕೆ ಸಾಧ್ಯವಿತ್ತು. ಆದರೆ ಅದು ಆಗಲಿಲ್ಲ. ಕೋಟ್ಯಾಂತರ ರೂಪಾಯಿಗಳು ಕೃಷಿ ಇಲಾಖೆಯಿಂದ ಖರ್ಚಾಗಿ, ನಿಮ್ಮ ನಾಲ್ಕೂವರೆ ವರ್ಷಗಳ ಬ್ಯಾಲೆನ್ಸ್‌ಷೀಟ್ ಏನೆಂದರೆ, ಸಂಪೂರ್ಣವಾಗಿ ಕೃಷಿ ರಂಗದಲ್ಲಿ ವಿಫಲವಾಗಿದೆ ಎನ್ನುವುದೇ ಅಂಶ.

ಶ್ರೀ ಸಿ. ಬೈರೇಗೌಡ :— ನಾನು ಮಾನ್ಯ ಸದಸ್ಯರು ಎತ್ತಿರುವ ಪ್ರಶ್ನೆಗೆ ಉತ್ತರಿಸುವಾಗ ವಿವರವಾದ ವಿವರಣೆ ನೀಡುತ್ತೇನೆ. ಆದರೆ, ದೇಶದಲ್ಲಿ ಏನಾಗಿದೆಯೆಂದರೆ, ವ್ಯವಸಾಯಗಾರರೆಂದರೆ ನಾವು ನಮ್ಮ ರಾಜ್ಯಾಂಗದಲ್ಲಿ ಎಲ್ಲರಿಗೂ ಸಮಾನವಾದ ಹಕ್ಕುಗಳನ್ನು ಕೊಟ್ಟಿದ್ದೇವೆ. ಆದರೆ, ರೈತ ವರ್ಗಕ್ಕೆ, ಬೇರೆ ವರ್ಗಗಳ ಜೊತೆ ಸಮಾನವಾದ ಹಕ್ಕುಗಳಿಲ್ಲ. ರೈತರೆಂದರೆ, ಈ ದೇಶದ ಎರಡನೇ ದರ್ಜೆ ನಾಗರೀಕರೆಂದು ಗುರುತಿಸುವಂತಾಗಿದೆ. ಅದಕ್ಕೆ ನಾನು ಉತ್ತರಿಸುವಾಗ ಹೇಳುತ್ತೇನೆ. ಅಂತಹ ಪರಿಸ್ಥಿತಿಯಲ್ಲಿ ನಾಲ್ಕೂವರೆ ವರ್ಷಗಳಲ್ಲಿ, ಎರಡನೇ ದರ್ಜೆ ನಾಗರೀಕರಾಗಿರುವುದನ್ನು ತಪ್ಪಿಸಬೇಕೆಂದು ತೀವ್ರ ಪ್ರಯತ್ನಗಳನ್ನು ನಡೆಸಿ, ಕೆಲವರಲ್ಲಿ ನಾವು ವಿಫಲರಾಗಿದ್ದೇವೆ. ಆದರೆ, ನಮ್ಮ ಉದ್ದೇಶ, ಗುರಿ ಏನಿದೆ, ಆ ಗುರಿ ತಲುಪುವತ್ತ ಪ್ರಾಮಾಣಿಕ ಪ್ರಯತ್ನ ನಡೆಸಿದ್ದೇವೆ. ಅನೇಕ ವಿಚಾರಗಳಲ್ಲಿ ಸಫಲತೆ ಕಂಡಿದ್ದೇವೆ. ಸಧ್ಯದಲ್ಲಿ ಇಷ್ಟು ಮಾತ್ರ ಹೇಳುತ್ತೇನೆ. ಉಳಿದಿದ್ದನ್ನು ಉತ್ತರಿಸುವಾಗ ಹೇಳುತ್ತೇನೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ :— ಸನ್ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವುದಕ್ಕೆ ಹೆಚ್ಚು ಸಮಯವಿಲ್ಲದೇ ಇರುವುದರಿಂದ ಬಹಳ ಪ್ರಮುಖವಾದಂಥ ಒಂದು ಅಂಶವನ್ನು ಮಾನ್ಯ ಬೈರೇಗೌಡರ ಗಮನಕ್ಕೆ ತರಲಿಚ್ಛಿಸುತ್ತೇನೆ. ಅದೇನೆಂದರೆ, ಕೃಷಿ ರಂಗಕ್ಕೆ ಬಹಳ ಅವಶ್ಯಕವಾಗಿರತಕ್ಕಂಥ ಈ ಸಣ್ಣ ನೀರಾವರಿ ವಿಷಯದ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಇವತ್ತು ಕರ್ನಾಟಕ ರಾಜ್ಯದಲ್ಲಿ 100ಕ್ಕೆ 64 ಪರ್ಸೆಂಟ್‌ನಷ್ಟು ಸಣ್ಣ ನೀರಾವರಿಯಿಂದ ಕೃಷಿ ಉತ್ಪನ್ನ ಆಗುತ್ತಿದೆ. ಆದರೆ, ಇವತ್ತು ನೀವು ಸಾವಿರಾರು ಕೋಟಿ ರೂಪಾಯಿಗಳನ್ನು ಭಾರಿ ನೀರಾವರಿಗೆ ಖರ್ಚು ಮಾಡುತ್ತಿದ್ದೀರಿ. ಇದಕ್ಕೆ ನಮ್ಮದೇನು ವಿರೋಧ ಇಲ್ಲ. ಭಾರಿ ನೀರಾವರಿಯಿಂದ ಕೃಷಿ ಉತ್ಪಾದನೆ ಕೇವಲ ನಮ್ಮದೇನು ವಿರೋಧ ಇಲ್ಲ. ಭಾರಿ ನೀರಾವರಿಯಿಂದ ಕೃಷಿ ಉತ್ಪಾದನೆ ಕೇವಲ 34 ಪರ್ಸೆಂಟ್‌ನಷ್ಟು ಇದ್ದರೆ, ಸಣ್ಣ ನೀರಾವರಿಯಿಂದ ಕೃಷಿ ಉತ್ಪಾದನೆ 64 ಪರ್ಸೆಂಟ್ ಆಗುತ್ತದೆ. ಆದ್ದರಿಂದ ಸಣ್ಣ ನೀರಾವರಿಗೆ ಸರ್ಕಾರ

ಕೊಟ್ಟಿರತಕ್ಕಂಥ ಗಮನ ಎಷ್ಟು? ಇದಕ್ಕೆ ಕೊಟ್ಟಿರತಕ್ಕಂಥ ಹಣ ಎಷ್ಟು? ಕೃಷಿ ಮಂತ್ರಿಗಳಾಗಿ ಸಣ್ಣ ನೀರಾವರಿಗೆ ನಿಮ್ಮ ಪ್ರಯತ್ನ ಏನು? ನನ್ನ ಪ್ರಕಾರ ಇಡೀ ಕರ್ನಾಟಕ ರಾಜ್ಯದಲ್ಲಿ ಅತ್ಯಂತ ನಿರ್ಲಕ್ಷ್ಯತೆಗೆ ಒಳಗಾಗಿರತಕ್ಕಂಥ ಇಲಾಖೆ ಎಂದರೆ, ಈ ಸಣ್ಣ ನೀರಾವರಿ ಇಲಾಖೆ. ಇವತ್ತಿನ ದಿವಸ ಬಡ ರೈತರು, ಮಧ್ಯಮ ವರ್ಗದ ರೈತರು ಸಣ್ಣ ನೀರಾವರಿ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರನ್ನು ರಕ್ಷಣೆ ಮಾಡುವುದಕ್ಕೆ ನಿಮ್ಮಿಂದ ಸಾಧ್ಯವಾಗಿಲ್ಲ. ಇದೇ ಸಂದರ್ಭದಲ್ಲಿ ರೈತರ ಬಗ್ಗೆ ಒಂದು ಪ್ರಶ್ನೆ. ಇವತ್ತು ರೈತರು ಬೆಳೆದಂಥ ಫಸಲನ್ನು ಬೀದಿಗೆ ಬಿಸಾಕುವಂಥ ಪರಿಸ್ಥಿತಿ ಬಂದಿದೆ. ಇದನ್ನು ರಕ್ಷಣೆ ಮಾಡುವುದಕ್ಕೆ ತೋಟಗಾರಿಕೆ ಇಲಾಖೆ ಏನು ಕೆಲಸ ಮಾಡಿದೆ? ಹೋದ ವರ್ಷ ರೈತರು ಆಲೂಗಡ್ಡೆ ಬೆಳೆದು ಬೀದಿಗೆ ಬಿಸಾಕುವಂಥ ಸಂದರ್ಭದಲ್ಲಿ ರೈತರು ಬೆಳೆದಂಥ ಆಲೂಗಡ್ಡೆಯನ್ನು ನಾವು ಕೊಂಡುಕೊಳ್ಳುತ್ತೇವೆಂದು ಹಾಪ್‌ಕಾಮ್ಸ್‌ನವರು ಮುಂದೆ ಬಂದರು. ಇದರಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ಆಗಿದೆ. ಇದರ ಬಗ್ಗೆ ಒಂದೆರಡು ಉದಾಹರಣೆಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಬುದಾಬಿಗೆ ಇವರು ಆಲೂಗಡ್ಡೆಯನ್ನು ಕಳುಹಿಸುತ್ತೇವೆಂದು ಹೇಳಿ, ಅಬುದಾಬಿಯಲ್ಲಿರತಕ್ಕಂಥ ಸುವಾರ್ಡ್ಯೂ ಕಂಪನಿಗೆ ಆಲೂಗಡ್ಡೆ ಕಳುಹಿಸುವುದಕ್ಕೆ ಮೆಮೊರ್ಯಾಂಡಮ್ ಆಫ್ ಅಂಡರ್‌ಸ್ಟ್ಯಾಂಡಿಂಗ್‌ಗೆ ಶ್ರೀ ವಿಠಲ್ ಚಂದ್ರಕಾಂತ್ ಎಂಬ ವ್ಯಕ್ತಿಯ ಜೊತೆ ಸಿಗ್ನೇಚರ್ ಮಾಡಿಸಿದ್ದಾರೆ. ಕೊಚ್ಚಿಯಿಂದ ಹಡಗಿನ ಮುಖಾಂತರ ಅಬುದಾಬಿಗೆ ಆಲೂಗಡ್ಡೆಯನ್ನು ಕಳುಹಿಸಿದ ಮೇಲೆ ಇವರು ಹಣಕ್ಕೆ ಅರ್ಜಿ ಹಾಕುತ್ತಾರೆ. ಹಾಪ್‌ಕಾಮ್ಸ್ ಸಂಸ್ಥೆ ಮಾರುಕಟ್ಟೆ ದಿನಾಂಕ 28-2-97 ರಂದು ಮೆಮೊರ್ಯಂಡಮ್ ಆಫ್ ಅಂಡರ್‌ಸ್ಟ್ಯಾಂಡಿಂಗ್‌ಗೆ ಮಾಡಿಕೊಂಡಿದ್ದ ಈ ಕರಾರಿನ ಪ್ರಕಾರ ಆಲೂಗಡ್ಡೆ ಆದೇಶ ತಲುಪಿದ 15 ದಿವಸದೊಳಗಾಗಿ ಹಾಪ್‌ಕಾಮ್ಸ್ ಸಂಸ್ಥೆ ಸಲ್ಲಿಸಿದ ಡಾಕ್ಯುಮೆಂಟ್ಸ್‌ನ್ನು ಒಪ್ಪಿಕೊಂಡ ವಿದೇಶಿ ಸಂಸ್ಥೆ 43 ಸಾವಿರ ಯು.ಎಸ್. ಡಾಲರ್ಸ್ ಮೊತ್ತವನ್ನು ಹಾಪ್‌ಕಾಮ್ಸ್‌ಗೆ ಪಾವತಿ ಮಾಡಬೇಕಾಗಿತ್ತು. 250 ಮೆಟ್ರಿಕ್ ಟನ್ ಆಲೂಗಡ್ಡೆಯನ್ನು ಕೊಚ್ಚಿಯಲ್ಲಿರತಕ್ಕಂಥ ಮೇಕರ್ಸ್ ಕೊಲಂಬಸ್ ಮಾರಿಟೈನ್ ಕಂಪನಿ ಮೂಲಕ ಕಳುಹಿಸಲಾಗಿತ್ತು. ಆದರೆ, ಆ ಕಂಪನಿಗೆ ಇವರು ಹಣಕ್ಕಾಗಿ ಅರ್ಜಿ ಹಾಕಿದಾಗ ಬಂದಂಥ ಉತ್ತರ ಏನೆಂದರೆ, ಆಲೂಗಡ್ಡೆ ಅಬುದಾಬಿಯನ್ನು ತಲುಪಿದ ನಂತರ ಸುವಾರ್ಡ್ಯೂ ಕಂಪನಿ ಹಾಪ್‌ಕಾಮ್ಸ್‌ಗೆ ಹಣವನ್ನು ಪಾವತಿ ಮಾಡಬೇಕಾಗಿದ್ದು, ಎಂ.ಓ.ಯು. ಒಪ್ಪಂದ ಮಾಡಿಕೊಂಡ ಶ್ರೀ ವಿಠಲ್ ಚಂದ್ರಕಾಂತ್ ಎಂಬ ವ್ಯಕ್ತಿ ನಮ್ಮ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿಲ್ಲ ಎಂದು ಹೇಳಿದ್ದಾರೆ. ಈತ ಆ ಕಂಪನಿಯವನೇ ಅಲ್ಲ. ಸುವಾರ್ಡ್ಯೂ ಕಂಪನಿಯ ಅಬುದಾಬಿ ಛೇಂಬರ್ಸ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀ ಈ ಕೆಳಕಂಡಂತೆ ಉತ್ತರ ನೀಡಿದೆ,

``The signature appearing on the contract previously attached, was that of a person who was not among those working for the company which authorised nobody to sign such contract."

This is the fate.

"We regret you to present any document that may support or prove that the signatory was only authorised to sign on behalf of Ms. SUWARDKO Trading and Agencies so as to enable us to take all measures that may ensure the life of your company." ಈ ಕಂಪನಿಯಿಂದ ಹಾಪ್‌ಕಾಮ್ಸ್‌ಗೆ ಹಣ ಬರಲಿಲ್ಲ. ರೈತ ಬೆಳೆದಂಥ ಅಲೂಗಡ್ಡೆ ಹಣ ಎಲ್ಲಿಗೆ ಹೋಯಿತೆಂಬುದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು. ಸುವಾರ್ಡ್ಕೊ ಕಂಪನಿಯಲ್ಲಿ ಕೆಲಸ ಮಾಡದೇ ಇರತಕ್ಕಂಥ ಮನುಷ್ಯನ ಜೊತೆ ಮೆಮೊರ್ಯಾಂಡಮ್ ಆಫ್ ಅಂಡರ್‌ಸ್ಟ್ಯಾಂಡಿಂಗ್‌ಗೆ ಸಹಿ ಮಾಡಿಸಿ, ಅವರಿಂದ ಹಣ ಕೇಳಿದರೆ ಆತ ನಮ್ಮಲ್ಲಿ ಕೆಲಸ ಮಾಡುತ್ತಿಲ್ಲವೆಂದು ಉತ್ತರ ಹೇಳಿದರು. ಇದರಿಂದ ಆದಂಥ ನಷ್ಟ ಎಷ್ಟು?

ಅಧ್ಯಕ್ಷರು :— ಎಂ.ಒ.ಯು. ಎಲ್ಲಿ ಸಹಿ ಆದದ್ದು?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಹಾಪ್‌ಕಾಮ್ಸ್ ಮ್ಯಾನೇಜಿಂಗ್ ಡೈರೆಕ್ಟರ್‌ರವರು ಬೆಂಗಳೂರಿನಲ್ಲಿ ಮೆಮೊರ್ಯಾಂಡಮ್ ಆಫ್ ಅಂಡರ್‌ಸ್ಟ್ಯಾಡಿಂಗ್‌ಗೆ ದಿನಾಂಕ 28-2-97 ರಂದು ಸಹಿ ಮಾಡಿದ್ದಾರೆ.

ಶ್ರೀ ಸಿ. ಭೈರೇಗೌಡ :— ಮಾನ್ಯ ಸದಸ್ಯರು ಸಾರ್ವಜನಿಕ ಲೆಕ್ಕಪತ್ರ ಸಮಿತಿ ನೀಡಿರತಕ್ಕಂಥ ವರದಿಯನ್ನು ಉಲ್ಲೇಖಿಸಿ ಮಾತನಾಡುತ್ತಿದ್ದಾರೆ. ಈ ಸದನದಲ್ಲಿ ಹಿಂದೆ ಇದೇ ವಿಷಯವನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ನಾನೇ ಒಪ್ಪಿಸಿದ್ದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ನಾನು ಈ ವಿಷಯವನ್ನು ಮೊದಲು ಪ್ರಸ್ತಾಪ ಮಾಡಿದ ನಂತರ ನೀವು ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ವಹಿಸಿದ್ದೀರಿ.

ಶ್ರೀ ಸಿ. ಭೈರೇಗೌಡ :— ಈ ಸದನ ಒಪ್ಪಿದ ಮೇಲೆ ಈ ವಿಷಯವನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ವಹಿಸಲಾಗಿತ್ತು. ಸಾರ್ವಜನಿಕ ಲೆಕ್ಕಪತ್ರ ಸಮಿತಿ ಈಗಾಗಲೇ ಪರಿಶೀಲನೆ ಮಾಡಿ ಒಂದು ವರದಿ ಕೊಟ್ಟಿದೆ. ಈ ವರದಿಯಲ್ಲಿ ಸೂಚಿಸಿರುವಂತೆ ಸಂಬಂಧಪಟ್ಟವರ ಮೇಲೆ ನೀವೆಲ್ಲಾ ಮೆಚ್ಚುವಂಥ ಕ್ರಮವನ್ನು ನಾನು ಖಂಡಿತವಾಗಿ ತೆಗೆದುಕೊಳ್ಳುತ್ತೇನೆ; ಅವರನ್ನು ಹಾಗೆಯೇ ಬಿಡುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ನಾನು ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಈ ಬಗ್ಗೆ ಕ್ರಮ ತೆಗೆದುಕೊಳ್ಳುವುದು ಬಿಡುವುದು ನಿಮಗೆ ಬಿಟ್ಟಿದ್ದು. ಒಂದು ಕಡೆ ಅಬುದಾಬಿಗೆ ಆಲೂಗಡ್ಡೆ ಕಳುಹಿಸಿದ್ದೀರಿ. ಇನ್ನೊಂದು ಕಡೆ ಶ್ರೀಲಂಕಕ್ಕೆ ಕಳುಹಿಸಿ ಇವತ್ತಿನವರೆಗೂ ಸಂಬಂಧಪಟ್ಟ ಸಂಸ್ಥೆಯಿಂದ 2250 ಅಮೇರಿಕನ್ ಡಾಲರ್ಸ್ ಮೊತ್ತವನ್ನು

ನಿಮ್ಮಿಂದ ವಸೂಲ್ಮಾಡುವುದಕ್ಕೆ ಆಗುವುದಕ್ಕೆ ಆಗಿಲ್ಲ. ದಿನಾಂಕ17-6-98 ರಂದು ಮದ್ರಾಸ್ ನಲ್ಲಿರತಕ್ಕಂಥ ಟಿಲ್ಡನ್ಸ್ಸ್ ಫಾರ್ಮ್ ಖಾಸಗಿ ನಿಯಮಿತರವರಿಗೆ, ದಿನಾಂಕ 28-6-98 ರಂದು ಅಶ್ವಿನಿ ಎಕ್ಸ್ಪೋರ್ಟ್ ನವರು ಮೆಮೊರ್ಯಾಂಡಮ್ ಆಫ್ ಅಂಡರ್ಸ್ಟ್ಯಾಂಡಿಂಗ್ಗೆ ಸಹಿ ಮಾಡಿ ಶ್ರೀಲಂಕಕ್ಕೆ ಆಲೂಗಡ್ಡೆಯನ್ನು ಕಳುಹಿಸಿದರು. ಈ ಮೇಲ್ಕಂಡ ಸಂಸ್ಥೆಗೆ ಕೃಷಿ ಉತ್ಪನ್ನಗಳ ಬೇಡಿಕೆಗಳನ್ನು ಹಾಪ್ಕಾಮ್ಸ್ನಿಂದ ಪೂರೈಸಿದ ನಂತರ, ಹಾಪ್ಕಾಮ್ಸ್ ಸಂಸ್ಥೆ ಉತ್ಪನ್ನದ ಮೂಲ ಬೆಲೆಯಲ್ಲಿ ಶೇಕಡ 5ರಷ್ಟು ದಲ್ಲಾಳಿ ಕಮೀಷನ್ನನ್ನು ಮೇಲ್ಕಂಡ ಸಂಸ್ಥೆ ನೀಡಬೇಕೆಂದು ಹಾಗೂ ಹಾಪ್ಕಾಮ್ಸ್ ಸಂಸ್ಥೆ ಮೇಲ್ಕಂಡ ಸಂಸ್ಥೆಗೆ 50 ಸಾವಿರ ರೂಪಾಯಿಗಳನ್ನು ಎಕ್ಸ್ಪೋರ್ಟ್ ಸಲುವಾಗಿ ಬೇಕಾಗುವ ಪ್ರಾಥಮಿಕ ವೆಚ್ಚಕ್ಕೆ ನೀಡುವುದು. ಸಂಸ್ಥೆ ದಿನಾಂಕ 22-6-96 ರಂದು ಸೆಲ್ಕಾನ್ ಫಾರ್ಮ್ ಖಾಸಗಿ ನಿಯಮಿತದವರಿಗೆ 50 ಸಾವಿರ ರೂಪಾಯಿಗಳ ಡಿಮಾಂಡ್ ಡ್ರಾಫ್ಟ್ನ್ನು ನೀಡದೆ, ಸದರಿ ಸಂಸ್ಥೆ ಇದುವರೆಗೂ ವಾಪಸ್ಸು ನೀಡಿದೆಯೋ ಇಲ್ಲವೋ ಎಂಬ ಬಗ್ಗೆ ಯಾವುದೇ ರೀತಿಯ ಮಾಹಿತಿ ಕಂಡು ಬಂದಿಲ್ಲ. ಹಾಗೆಯೇ ಯಾವ ಬ್ಯಾಂಕ್ ಕೂಡ ಗ್ಯಾರಂಟಿಯನ್ನು ಒಪ್ಪಿಕೊಂಡಿಲ್ಲ. ಇವರ ಮೇಲೆ ಇದುವರೆಗೂ ಯಾವುದೇ ರೀತಿಯ ಕ್ರಮವನ್ನು ಜರುಗಿಸಿಲ್ಲ. ಇದು ಮಾನ್ಯ ಬೈರೇಗೌಡರಿಗೂ ಸಹ ಗೊತ್ತಿದೆ. ನಿಯಮಾವಳಿಗಳು ಹಾಗೂ ಕಾನೂನು ಪ್ರಕಾರ ಇವರ ಮೇಲೆ ತನಿಖೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆಂದು ತಾವು ಹೇಳುತ್ತೀರಿ. ಆದರೆ ರೈತರ ಹಿತರಕ್ಷಣೆಯನ್ನು ಯಾವ ರೀತಿ ಮಾಡುತ್ತೀರಿ ಎಂಬುದು ನನ್ನ ಪ್ರಶ್ನೆಯಾಗಿದೆ. ಕಾನೂನು

6.10 ಪಿ.ಎಂ.

ಪ್ರಕಾರ ಏನೇನು ಕ್ರಮ ಕೈಗೊಳ್ಳುತ್ತೀರಿ. ಅದರಲ್ಲಿ ಇನ್ನು ಬಹಳ ವಿಚಿತ್ರವಾಗಿದೆ. ನೀವೇ ಕೊಟ್ಟಿರತಕ್ಕಂಥ ತೋಟಗಾರಿಕೆ ಇಲಾಖೆಯ ಆಡಿಟ್ ರಿಪೋರ್ಟ್ನ್ನು ಓದಿರಬಹುದು. Comptroller.. 1998ಕ್ಕೆ ಕೊಟ್ಟಿರುವ ಆಡಿಟ್ ರಿಪೋರ್ಟ್ ನಿಮ್ಮ ಗಮನಕ್ಕೆ ಬಂದಿರಬಹುದೆಂದು ಕಾಣಿಸುತ್ತದೆ.

Following are the observations in the Report:

"Out of 329 DDOs, only 39 DDOs on an average submitted monthly expenditure statements. Thus large amount of expenditure statements. Thus, large amount of expenditure was not monitored. Director took no action against the defaulting DDOs. Expenditure contron mechanism was non-functional and facilitated fadulent drawal of Rs.3.49 crore."

"Te Sub-treasury Officer, Hunsagi, passed the contigent bills for payment inspite of incomplete and manipulated allotments recorded

on the bills and failed th ensure even the aithmetical accuracy of the bills and ignored drawal of huge funds by in-charge ADH, Narayanpur by presenting large number of bills at a time."

"Though the total area of Narayanpur farm was only 60 acres, Rs.84.79 lakhs was drawn by Sri Pandit Noola for purportedly levelling 706 acres of land and clearing jungle growth over an area of 2182 acres. These works were fictitious."

"Funds aggregating Rs,.3.43 acres remained in Personal Deposit Account for 2 to 6 years without being credited to Government." ಇದನ್ನು ಎಲ್ಲಾದರೂ ಊಹೆ ಮಾಡುವುದಕ್ಕೆ ಸಾಧ್ಯವಿದೆಯೇ? ಎರಡರಿಂದ ಆರು ವರ್ಷಗಳ ಕಾಲ ಒಂದು ಇಲಾಖೆಯ ಹಣ 3.43 ಲಕ್ಷ ರೂಪಾಯಿಗಳು ಪರ್ಸನಲ್ ಡಿಪಾಜಿಟ್‌ನಲ್ಲಿದೆ. ಕರ್ನಾಟಕ ರಾಜ್ಯದಲ್ಲಿ ಇವತ್ತು ಯಾವ ರೀತಿಯಾಗಿ ಧೈತರ ರಕ್ಷಣೆಯಾಗುತ್ತಿದೆ?

Further:

"Funds aggregating Rs.3,43....detailed contigent bills during the period of 19991-92 to 1995-96 had not been submitted by three officers. The matter needs investigation by the government."

ಈ ಸರ್ಕಾರದಲ್ಲಿ ಏನು ನಡೆಯುತ್ತಿದೆ?

ಶ್ರೀ ಸಿ. ಬೈರೇಗೌಡ :— ಈ ವಿಚಾರವಾಗಿ ಈಗಾಗಲೇ ಲೋಕಾಯುಕ್ತದಲ್ಲಿ ವಿಚಾರಣೆ ನಡೆಯುತ್ತಿದೆ. ನಾನು ಲೋಕಾಯುಕ್ತದ ಅಧಿಕಾರಿಗಳನ್ನು ಹಾಗೂ ನಮ್ಮ ಇಲಾಖೆಯ ಅಧಿಕಾರಿಗಳನ್ನು ಕರೆಸಿ ಈ ಘಟನೆಯ ವಿವರಗಳನ್ನು ಪಡೆದಿದ್ದೇನೆ. ನಾನು ಅವರಿಗೆ ತತ್‌ಕ್ಷಣ ವರದಿಯನ್ನು ಕೊಟ್ಟು ಕ್ರಮ ಕೈಗೊಳ್ಳಬೇಕೆಂದು ಸೂಚನೆಯನ್ನು ಸಹ ಕೊಟ್ಟಿದ್ದೇನೆ. ಇದು ಹಿಂದೆ 1991 ರಿಂದ ನಡೆದಿರತಕ್ಕಂಥದ್ದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಇದರಲ್ಲಿ 1997-98ರಲ್ಲಿ ಇದು ನಡೆದಿರತಕ್ಕಂಥದ್ದು ಇದೆ.

ಶ್ರೀ ಸಿ. ಬೈರೇಗೌಡ :— ಈ ವಿಷಯವಾಗಿ ಇದು ಲೋಕಾಯುಕ್ತದಲ್ಲಿ ವಿಚಾರಣೆಯಲ್ಲಿದೆ, ಅವರು ಏನು ವರದಿಯನ್ನು ಕೊಡುತ್ತಾರೆ ನೋಡೋಣ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಅದು ಲೋಕಾಯುಕ್ತಕ್ಕೆ ಹೋಗಿದ್ದು ನನಗೆ ಗೊತ್ತಿದೆ. ಲೋಕಾಯುಕ್ತಕ್ಕೆ ಹೋಗಿದ್ದು ಎಲ್ಲಾ ವಿಚಾರಗಳ ಬಗ್ಗೆ ಅಲ್ಲ.

ಶ್ರೀ ಸಿ. ಬೈರೇಗೌಡ :—ಲೋಕಾಯುಕ್ತದಲ್ಲಿ ಕೂಡ ಕೆಲವು ಇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಕೆಲವು ಲೋಕಾಯುಕ್ತದಲ್ಲಿ ಇವೆ, ಎಲ್ಲವೂ ಕೂಡ ಇಲ್ಲ. ಪರ್ಟಿಕ್ಯೂಲರ್ ಆಗಿ this point ಲೋಕಾಯುಕ್ತಕ್ಕೆ ಹೋಗಿಯೇ ಇಲ್ಲ.

ಶ್ರೀ ಸಿ. ಬೈರೇಗೌಡ :— ಪರ್ಟಿಕ್ಯೂಲರ್ ಆಗಿ ಈ pandit Noda ಬಗೆಗಿನ ಕೇಸು ಲೋಕಾಯುಕ್ತದಲ್ಲಿದೆ. ಇದು ನಾರಾಯಣಪುರ ಫಾರ್ಮ್‌ಗೆ ಸಂಬಂಧಪಟ್ಟಿದ್ದು ಲೋಕಾಯುಕ್ತದಲ್ಲಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಎರಡರಿಂದ ಆರು ವರ್ಷಗಳವರೆಗೆ ಪರ್ಸನಲ್ ಡಿಪಾಜಿಟ್‌ನಲ್ಲಿ ಇದ್ದದ್ದು, ಏನು ಹಣ ಇದೆ, ಅದು ಲೋಕಾಯುಕ್ತದಲ್ಲಿ ಇಲ್ಲ. ಲೆವಲಿಂಗ್ ಆಫ್ ಲ್ಯಾಂಡ್ ಮತ್ತು ಅಲ್ಲಿ ಖರ್ಚು ಮಾಡಬೇಕಾದ ಹಣದ ಫ್ರಾಡ್ ಬಿಲ್ಸ್ ಮಾತ್ರ ಲೋಕಾಯುಕ್ತದಲ್ಲಿದೆ. ಈ 3.43 ಲಕ್ಷ ರೂಪಾಯಿಗಳು ಏನು ಇದೆ, ಇದು ಲೋಕಾಯುಕ್ತಕ್ಕೆ ಹೋಗಿಲ್ಲ. Oil palm develeopment programme ಬಗೆಗಿನ ಕೇಸು ಲೋಕಾಯುಕ್ತಕ್ಕೆ ಹೋಗಿದೆಯೇ?

ಅಧ್ಯಕ್ಷರು :— ಮಾನ್ಯ ಶ್ರೀರಾಮರೆಡ್ಡಿಯವರೆ, ಮಾನ್ಯ ಖರ್ಗೆಯವರು ಏನೋ ಹೇಳುತ್ತಿದ್ದಾರೆ, ತಾವು ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ನಾನು ಏನೂ ಹೇಳುವುದಿಲ್ಲ. ನೀವು ಈಗ ರಿಪೋರ್ಟ್ ಓದುತ್ತೀರಲ್ಲಾ, ಯಾವ ರೀತಿ ಮಾಡಬೇಕು ಎಂದು ತಾವು ಹೇಳುತ್ತಿದ್ದೀರಿ? ಅದರ ಬಗ್ಗೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿ. ದುರ್ದೈವದಿಂದ ನೀವು ಅವರ ಜೊತೆಯಲ್ಲಿ ಹೋಗಬೇಕಲ್ಲ, ಆಗ ಏನು ಹೇಳುತ್ತೀರಿ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಯಾವುದರ ಬಗ್ಗೆ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :— ಇದರ ಬಗ್ಗೆ ಕೇಳುತ್ತಾರೇನು? ನೀವು ನ್ಯಾಚುರಲ್ಲಾಗಿ ಆಲಾಯಿನ್ಸ್ ಪಾರ್ಟಿ ಅಂದರೆ, ನೀವು ಸರ್ಕಾರದ ಜೊತೆಯಲ್ಲಿ ಇದ್ದವರು. ನಿಮ್ಮ ಸಪೋರ್ಟ್‌ದಿಂದ ಅವರು ಇದ್ದವರು, ಒಟ್ಟು ಶಾಸಕರು 108 ನಿಮ್ಮ ಸಪೋರ್ಟ್‌ದಿಂದ 112 ಆಗಿದ್ದು, ನಿಮ್ಮ ಸಪೋರ್ಟ್ ಇಲ್ಲದೇ ಅವರು ಸರ್ಕಾರವನ್ನು ನಡೆಸುವುದಾಗುವುದಿಲ್ಲ, ನೀವು ಆಗ ಏನು ಹೇಳುತ್ತೀರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ನಾನು ಹೇಳುತ್ತೇನೆ. ಕೇಳಿ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಮಾನ್ಯ ವಾಟಾಳ್ ನಾಗರಾಜ್‌ರವರು ಈ ವಿಚಾರವನ್ನು ಕೇಳಬಾರದಿತ್ತೆ, ಅವರು ನೋಡಬಾರದಿತ್ತೆ, ಎಂದು ಕೇಳಿದರಿ. ಅದೇ ರೀತಿಯಾಗಿ ನಾವು ಮಾನ್ಯ ಶ್ರೀರಾಮರೆಡ್ಡಿಯವರನ್ನು ಕೆಲವು ವಿಚಾರದಲ್ಲಿ ಕೇಳಬೇಕಾಗಿದೆ, ಹೇಗೆ ಇದು, ಏಕೆ ಇದು ಎಂದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಮಾನ್ಯ ಅಧ್ಯಕ್ಷರೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿರುವುದರಲ್ಲಿ ಒಂದು ಅಂಶ ಸತ್ಯವಿದೆ. ನಾವು ಅವರಿಗೆ ಬೆಂಬಲವನ್ನು ಕೊಟ್ಟಿರತಕ್ಕಂಥದ್ದು ನಿಜ. ಇಲ್ಲವೆಂದು ಹೇಳುತ್ತಿಲ್ಲ. ಆದರೆ ಹಣವನ್ನು ಕಳ್ಳತನ ಮಾಡಿ ಎಂದು ನಾವು ಬೆಂಬಲವನ್ನು ಕೊಟ್ಟಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಅದು ಕಳ್ಳತನ ಮಾಡುವವರಿಗೆ ಬೆಂಬಲ ಕೊಟ್ಟಂತೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ನಮ್ಮನ್ನು ನಿಮ್ಮನ್ನು ಈ ರಾಜ್ಯದ ಜನ ಮತ ಹಾಕಿ ರಾಜ್ಯದ ಹಿತವನ್ನು ಕಾಪಾಡಬೇಕೆಂದು ಕಳುಹಿಸಿದ್ದಾರೆ. ನಾವು ನೀವು ಸರಿಯಾಗಿ ಇಲ್ಲಿ ಕೆಲಸ ಮಾಡದೇ ರಾಜ್ಯದ ಹಿತವನ್ನು ಕಾಪಾಡದಿದ್ದರೆ, ಅದಕ್ಕೆ ಏನು ಉತ್ತರ ಹೇಳಬೇಕಾಗುತ್ತದೆ? ಅದೇ ಸಮಸ್ಯೆ ಇಲ್ಲಿ ಇರುವುದು, ಬೇರೆ ಏನು ಸಮಸ್ಯೆ ಇದೆ ಇಲ್ಲಿ? ಕೆಲವೊಂದು ವಿಷಯಗಳ ಬಗ್ಗೆ ನಾವು ಬೆಂಬಲವನ್ನು ಕೊಡಬೇಕಾಗುತ್ತದೆ.

ಅಧ್ಯಕ್ಷರು :— ಹೊಂದಾಣಿಕೆ ಮಾಡಿಕೊಂಡಿದ್ದು ರಾಜಕೀಯ ಐಡಿಯಾಸ್ ಮೇಲೆ, ಇವು ಅಡ್ಮಿನಿಸ್ಟ್ರೇಷನ್ ಆಕ್ಟ್ಸ್. ನೀವು ಮಾತನಾಡುತ್ತಿರುವುದು ಅಡ್ಮಿನಿಸ್ಟ್ರೇಷನ್ ಆಕ್ಟ್ಸ್ ಮೇಲೆ;

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಆ ಪ್ರಶ್ನೆ ಬಂದಾಗ ಅದರ ಬಗ್ಗೆ ಮಾತನಾಡೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನೀವು ಅಂತಹವರಿಗೆ ಸಹಾಯ ಮಾಡುವುದೇ? ವಾಲೆಂಟರಿ ನಿವೃತ್ತಿ ತೆಗೆದುಕೊಂಡು, ಓಲ್ಡ್‌ಏಜ್ ಪೆನ್ಷನ್ ತೆಗೆದುಕೊಂಡು ಹೋದರೂ ನೀವು ಅವರನ್ನು ಬಿಡುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಅವರು ನಿಮ್ಮ ಮೇಲೆ ನಮ್ಮನ್ನು ಎತ್ತಿ ಕಟ್ಟುತ್ತಿದ್ದಾರೆ. ನಿಮ್ಮನ್ನು ಚಿಂದಿಚಿಂದಿ ಮಾಡಿ ಬಿಡುತ್ತಾರೆ, ನೀವು ಹಾಗೆ ಇರಿ ಎಂದು ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :— ನಾನು ಹೇಳಿದ್ದು, ನಿಮ್ಮನ್ನು ಚಿಂದಿ ಚಿಂದಿ ಮಾಡಿ ಮಾಡಿಬಿಡುತ್ತಾರೆಂದರೆ, ಅವರು ಹೇಳುತ್ತಾರೆ, ನಾನು ನಿಮ್ಮನ್ನು ಎತ್ತಿ ಕಟ್ಟುತ್ತಿದ್ದೇನೆಂದು. ನಾನು ನಿಮ್ಮನ್ನು ಎತ್ತಿಕಟ್ಟುವುದಕ್ಕೆ ಸಾಧ್ಯವೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ನನ್ನನ್ನು ಅವರ ಮೇಲೆ ಎತ್ತಿಕಟ್ಟುವುದು.

ಅಧ್ಯಕ್ಷರು :— ನಾನು ಸಮಗ್ರವಾಗಿ ಉಳಿದು ಹೋಗಿದ್ದರೆ ನಿಮಗೆ ಚಿಂದಿ ಚಿಂದಿ ಮಾಡುವುದಕ್ಕೆ ಅವಕಾಶ ಇತ್ತು, ನಾನು ಈಗಾಗಲೇ ಚಿಂದಿ ಚಿಂದಿ ಆಗಿ ಹೋಗಿ ಬಿಟ್ಟಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಮಾನ್ಯ ಅಧ್ಯಕ್ಷರೆ, oil-palm.. ನಿಮಗೆ ಇಂಪ್ಲಿಮೆಂಟ್ ಮಾಡಿ ಎಂದು ಅವರು ಹೇಳಿದರು. ನೀವು ಏನು ಇಂಪ್ಲಿಮೆಂಟ್ ಮಾಡಿದಿರಿ?

> "It was to implement only out of funds released by the Government of India duringthe first four years. Out of the expenditure Rs.17.51 crores as o March 1998. The State contributed only Rs.3.08 crores as against 4.08 crores. Prescribed as per norm resulted in a shortfall of state's share by 1.13 crores. Physical progress under OPDP was only 33% of target which was not commensurate with the financial progress due to the non-utilisation of Rs.3.5 lakhs, seedling raised at a cost of Rs.1,28 crores and huge maintenance expenditure of Rs.1.08 crores on an average..."

ನೀವು ಈ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಕರ್ನಾಟಕ ರಾಜ್ಯದಲ್ಲಿ ಜಾರಿಗೆ ತರದಿದ್ದರೆ ಏನು ಪ್ರಯೋಜನ? ನೀವು ಅದಕ್ಕೆ ರಾಜ್ಯ ಸರ್ಕಾರದ ಪಾಲು ಹಣವನ್ನು ಕೊಡಲಿಲ್ಲ, ಅದರ ಪರಿಣಾಮ ಏನಾಯಿತು? ಕೇಂದ್ರ ಸರ್ಕಾರದ ಆ 17 ಕೋಟಿ ರೂಪಾಯಿಗಳನ್ನು ಉಪಯೋಗ ಮಾಡಿಕೊಳ್ಳುವುದಕ್ಕಾಗಲಿಲ್ಲ; ಆ ಕಾರ್ಯಕ್ರಮ ಜಾರಿಯಾಗಲಿಲ್ಲ, ಹೀಗಾದರೆ ಇದರಿಂದ ರೈತರಿಗೆ ಯಾವ ರೀತಿಯಾಗಿ ಸಹಾಯವಾಗುತ್ತದೆ, ನಿಮ್ಮಿಂದ ಅವರು ಏನು ನಿರೀಕ್ಷೆ ಮಾಡುವುದಕ್ಕಾಗುತ್ತದೆ?

> ``The State Government involved a private company inspite of strict instruction of the Central Government that private companies should not be involved in that."

ಎಂದು ಹೇಳಿದರು ಕೂಡ ನೀವು ಪ್ರೈವೇಟ್ ಏಜೆನ್ಸಿಯನ್ನು ಓಪಿಡಿಎಸ್ ಪ್ರೋಗ್ರಾಮ್‌ದಲ್ಲಿ ಏಕೆ ಫಿಕ್ಸ್ ಮಾಡಿದಿರಿ? ನಿಮಗೆ ಆ ರೀತಿ ಮಾಡುವುದಕ್ಕೆ ಯಾರು ಅಧಿಕಾರವನ್ನು

ಕೊಟ್ಟರು? ಆದಕ್ಕೆ ನೀವು ಏಕೆ ಇನ್‌ವಾಲ್ವ್ ಮಾಡಿಸಿದಿರಿ ಇವತ್ತು ಅದರ ಪರಿಣಾಮ ಏನಾಗಿದೆ ನಿಮಗೆ ಗೊತ್ತೆ?

> "State Government involved private companies in the implementation of OPDP in disregard of guidelines prescribed by Government of India. The controls prescribed by Government for private sector participation were inadequate; Rs.4.20 crores of sultivation subsidy was released to the oil palm growers by Government through orivate companies without ensuring its proper utilisation. In the absence of any monitoring by the Director, the utilisation of subsidy was doubtful."

ಈ ಬಗ್ಗೆ ನಿಮಗೆ ಗೈಡ್‌ಲೈನ್ಸ್ ಇಲ್ಲವೇ? ಪ್ರೈವೇಟ್ ಏಜೆನ್ಸಿಯನ್ನು ಇನ್‌ವಾಲ್ವ್ ಮಾಡುವುದಕ್ಕೆ ನಿಮಗೆ ಅಧಿಕಾರವನ್ನು ಕೊಟ್ಟವರು ಯಾರು? ನೀವು ಏತಕ್ಕಾಗಿ ಪ್ರೈವೇಟ್ ಏಜೆನ್ಸಿಗೆ ಕೊಟ್ಟದ್ದೀರಿ? ಅದಕ್ಕೆ ಉತ್ತರವನ್ನು ಹೇಳಬೇಕಾಗುತ್ತದೆ. ನನ್ನ ನೇರವಾದಂತಹ ಆರೋಪ ನಿಮ್ಮ ಮೇಲೆ, ನಿಮ್ಮ ಸರ್ಕಾರದ ಮೇಲೆ ಏನಿದೆ ಎಂದರೆ ಖಾಸಗಿಯವರಿಗೆ ಏಜೆನ್ಸಿಯನ್ನು ಕೊಟ್ಟಿರುವುದರಿಂದ ಇದರಲ್ಲಿ ಹಣದ ದುರುಪಯೋಗದ ಪ್ರಶ್ನೆಯನ್ನು ಬಿಟ್ಟರೆ ಬೇರೆ ಏನೂ ಇಲ್ಲ. ನಿಮಗೆ ಗೈಡ್‌ಲೈನ್ಸ್ ಇದ್ದರೂ ಕೂಡ ಏತಕ್ಕಾಗಿ ಪ್ರೈವೇಟ್ ಕಂಪನಿಗಳನ್ನು ಇದರಲ್ಲಿ ಇನ್‌ವಾಲ್ವ್ ಮಾಡಿಸಿದ್ದೀರಿ? ಏಕೆ ಪ್ರೈವೇಟ್ ಏಜೆನ್ಸಿಯನ್ನು ಸೇರಿಸಿಕೊಂಡಿದ್ದೀರಿ? ಹಾಗೆಯೇ ನೀವು ಮಾಡಿದಂತರ ರೂಲ್ಸ್‌ನ್ನು ಹಂತಹಂತವಾಗಿ ವಯೋಲೇಟ್ ಮಾಡಿದಂತಹ ಸರ್ಕಾರ, ಮಾನ್ಯ ಬೈರೇಗೌಡರೆ, ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿ, ಸರ್ಕಾರದ ಸೂಚನೆ ಹಾಗೂ ಸುಪ್ರೀಂಕೋರ್ಟಿನ ನಿರ್ದೇಶನ 1984ರ ನಂತರ ದಿನಗೂಲಿ ಕೆಲಸಕ್ಕೆ ಸೇರಿಸಿಕೊಳ್ಳಬಾರದು ಎಂದು ಆದೇಶವಿದ್ದರೂ ಸಹ 1061 ಜನರನ್ನು ದಿನಗೂಲಿ ಕೆಲಸಕ್ಕೆ ಸೇರಿಸಿ ಕೊಂಡಿದ್ದಾರೆ.

> ``In disregard to repeated instructions issued by State Government imposing ban on daily wage appointments, officers of the department appointed 1061 persons on daily wages from July 1984 to January 1990 and continued them in service. Full details of the officers who made these appointments and number of persons appointed by each officer were not available with the Director. Wages paid to such irregular appointees aggregated to Rs.5.01 crore during 1993-94 to 1997-98."

1993-94 ರಿಂದ 1997-98 ರವರೆಗೆ 5.1 ಕೋಟಿರೂಪಾಯಿಗಳು ಈ ತೋಟಗಾರಿಕೆ ಇಲಾಖೆಯಲ್ಲಿ ಮಿಸ್‌ಯೂಸ್ ಆಗಿದೆ. ಇದರಲ್ಲಿ ನಾರಾಯಣಪುರದ್ದು ಸೇರಿರಬಹುದು.

ಅಧ್ಯಕ್ಷರು :— ಮಾನ್ಯ ಶ್ರೀರಾಮರೆಡ್ಡಿಯವರೆ ನಾವು ಈ ರೀತಿ ಮಾಡೋಣ. ನಮ್ಮ ಸಿಪಿಎಲ್ ಮೀಟಿಂಗ್‌ಗೆ ಛೇರ್ಮನ್‌ರು ಬಂದಿದ್ದಾರೆ. ತಾವು ನಾಳೇ ದಿವಸ ತಮ್ಮ ಭಾಷಣವನ್ನು ಮುಂದುವರಿಸಬಹುದು. ನಮಗೆ ಈಗ ಸಮಯದ ಅಭಾವ ಆಗುತ್ತಿರುವುದರಿಂದ ನಾಳೆ ಬೆಳಿಗ್ಗೆ ಸದನವು 10 ಗಂಟೆಗೆ ಸೇರೋಣ. ನಾಳೆ ಶೂನ್ಯ ವೇಳೆ ಇರುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ನಾಳೆ 10 ಗಂಟೆಗೆ ಈ ಸದನವು ಸೇರುವುದರಿಂದ ಅವರು ಡಿಮ್ಯಾಂಡ್ ಎಲ್ಲವನ್ನು ಒಟ್ಟಿಗೆ ಮೂವ್ ಮಾಡಿದರೆ ನಾವೆಲ್ಲಾ ಅದರ ಮೇಲೆ ಮಾತನಾಡುವುದಕ್ಕೆ ಸಾಧ್ಯ ಆಗುತ್ತದೆ.

MR. SPEAKER :— I feel we meet by 10.00 A.M. ಅದು ಹೇಗೆ ಆಗುತ್ತದೆಯೋ ನೋಡೋಣ, ಅದರ ಬಗ್ಗೆ ಐಡಿಯಾ ಇಲ್ಲ. ನಾಳೆ ಬೆಳಿಗ್ಗೆ ಸದನವು 10 ಗಂಟೆಗೆ ಸೇರೋಣ, ಎಲ್ಲಾ ಮಾನ್ಯ ಸದಸ್ಯರಿಗೂ ನಾವು ಈಗಲೇ ಹೇಳುತ್ತಿದ್ದೇನೆ. ನಾಳೆ ಶೂನ್ಯ ವೇಳೆ ಇರುವುದಿಲ್ಲ. ಪ್ರಶ್ನೋತ್ತರ ವೇಳೆ ಮುಗಿದ ನಂತರ ಬೇಡಿಕೆಗಳ ಮೇಲೆ ಚರ್ಚೆಯನ್ನು ತೆಗೆದುಕೊಂಡು ನಂತರ ಒಂದು ಬಿಲ್ಲನ್ನು ಪಾಸು ಮಾಡಿಕೊಳ್ಳೋಣ. ಈಗ ಸಭೆಯನ್ನು ಮುಂದೂಡಲಾಗಿದೆ ಪುನಃ ನಾಳೆ ಬೆಳಿಗ್ಗೆ 10-00 ಗಂಟೆಗೆ ಸಮಾವೇಶಗೊಳ್ಳೋಣ.

(ಸದನವು ಸಂಜೆ 6 ಗಂಟೆ 23 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ 6ನೇ ಜುಲೈ 1999ರ ಮಂಗಳವಾರ ಬೆಳಿಗ್ಗೆ 10-00 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)